

# ಅಧ್ಯಾಯ ೮ ಶಿಕ್ಷಣ ಹಾಗೂ ಸಾಮಾಜಿಕ ಜೀವನ



# ಅಧ್ಯಾಯ ೮



*ಸಾಂಪ್ರದಾಯಿಕ ಗುರುಕುಲ*

## ಶಿಕ್ಷಣ ಹಾಗೂ ಸಾಮಾಜಿಕ ಜೀವನ

ಪ್ರಾಚೀನ ಕರ್ನಾಟಕದಲ್ಲಿ, ಅಗ್ರಹಾರ, ಮಠ ಹಾಗೂ ಘಟಿಕಸ್ಥಾನ ಎಂಬ ಶಿಕ್ಷಣ ಸಂಸ್ಥೆಗಳ ಬಲಿಷ್ಠವಾದ ಹಂದರವು ಅಸ್ತಿತ್ವದಲ್ಲಿತ್ತು. ಭೂಮಿ, ಮನೆ ಹಾಗೂ ಇತರ ಸೌಕರ್ಯಗಳನ್ನು ನೀಡಲಾದ ಬ್ರಾಹ್ಮಣ ವಿದ್ವಾಂಸ ವಸಾಹತುಗಳನ್ನು ಅಗ್ರಹಾರವೆಂದು ಕರೆಯಲಾಗುತ್ತಿತ್ತು. ಬ್ರಾಹ್ಮಣರಿಂದ ಅಪೇಕ್ಷಿಸಲಾದ ಷಟ್ಕರ್ಮಗಳ ಭಾಗವಾದ ವ್ಯಾಸಂಘಿಕ ಸಾಧನೆಗಳನ್ನು ಪೂರೈಸಲು ಸಾಧ್ಯವಾಗಲೆಂದು ಅವರಿಗೆ ಇವೆಲ್ಲವನ್ನೂ ನೀಡಲಾಗುತ್ತಿತ್ತು. ಆ ಆರು ಕರ್ಮಗಳು ಅಥವಾ ಹೊಣೆಗಾರಿಕೆಗಳು ಯಾವುವೆಂದರೆ, ಯಜ್ಞ (ಬಲಿಗಳನ್ನು ನೀಡುವುದು / ಹೋಮ–ಹವನಾದಿಗಳನ್ನು ಮಾಡುವುದು), ಯಾಜನ (ಹೋಮ–ಹವನಾದಿಗಳ ಪಾರುಪತ್ಯವನ್ನು ವಹಿಸುವುದು), ಅಧ್ಯಯನ (ತಮ್ಮನ್ನು ತಾವು ಓದು/ಅಧ್ಯಯನದಲ್ಲಿ ತೊಡಗಿಸಿಕೊಳ್ಳುವುದು), ಅಧ್ಯಾಪನ (ಬೋಧನೆ), ದಾನ (ಉಡುಗೊರೆಗಳನ್ನು ನೀಡುವುದು) ಹಾಗೂ ಪ್ರತಿಗ್ರಹ (ಉಡುಗೊರೆಗಳನ್ನು ಪಡೆಯುವುದು).

ಕರ್ನಾಟಕದ ಪ್ರತಿಯೊಂದು ತಾಲ್ಲೂಕಿನಲ್ಲೂ ಮೂರರಿಂದ ನಾಲ್ಕು ಅಗ್ರಹಾರಗಳು ಇದ್ದು, ರಾಜ್ಯದಲ್ಲಿ ನೂರಾರು ಅಗ್ರಹಾರಗಳು ಇತ್ತೆಂದು ಪ್ರಾಚೀನ ಶಾಸನಗಳು ಹೇಳುತ್ತವೆ. ಇವುಗಳ ಸ್ಥಾಪನೆ ವಿಜಯನಗರದ ಆಳ್ವಿಕೆಯಲ್ಲಿ ಆಗಿ, ಕೆಳದಿಯ ನಾಯಕರು



ಅಗ್ರಹಾರದ ಒಂದು ನೋಟ



ಹಾಗೂ ಮೈಸೂರಿನ ಒಡೆಯರ ಕಾಲದಲ್ಲೂ ಮುಂದುವರೆಯಿತು. ರಾಜರಾಣಿಯರು, ಸೇನಾಧಿಪತಿಗಳು ಹಾಗೂ ಇತರ ಶ್ರೀಮಂತರು ಸಾಮಾನ್ಯವಾಗಿ ಅಗ್ರಹಾರಗಳ ಸ್ಥಾಪನೆ ಮಾಡುತ್ತಿದ್ದರು.ದೇವಾಲಯ ಅಥವಾ ಕೆರೆಗಳ ನಿರ್ಮಾಣದಂತೆ, ಅದೂ ಸಹ ಒಂದು ಸಹಾಯಾರ್ಥ ಕಾರ್ಯವೆಂದು ಪರಿಗಣಿಸಲಾಗುತ್ತಿತ್ತು.

ಕೃಷಿಯು ವೃದ್ಧಿಸುತ್ತಿರುವ ಗ್ರಾಮವೊಂದಕ್ಕೆ ನಿರ್ದಿಷ್ಟ ಸಂಖ್ಯೆಯ ಬ್ರಾಹ್ಮಣ ವಿದ್ವಾಂಸರನ್ನು ಆಮಂತ್ರಿಸಲಾಗುತ್ತಿತ್ತು. ಭೂಮಿಯನ್ನು ಖರೀದಿ ಮಾಡಿ ಈ ವಿದ್ವಾಂಸರಿಗೆ ಹಂಚಲಾಗುತ್ತಿತ್ತು.ಕೆಲವು ದೊಡ್ಡ ಪಟ್ಟಣ ಹಾಗೂ ನಗರಗಳಲ್ಲಿ, ಈ ವಿದ್ವಾಂಸರಿಗೆಂದೇ ಮೀಸಲಾದ ಬ್ರಹ್ಮಪುರಿಗಳೆಂಬ ಪ್ರದೇಶಗಳನ್ನು ನೀಡಲಾಗುತ್ತಿತ್ತು. ಶಿವಮೊಗ್ಗ ಜಿಲ್ಲೆಯ ಬಳ್ಳಿಗಾಮಿಯಲ್ಲಿ (ಬಳ್ಳಿಗಾವಿ) ಏಳು ಬ್ರಹ್ಮಪುರಿಗಳು ಇದ್ದವು, ಚಾಲುಕ್ಯರ ಕಾಲದಲ್ಲಿ, ಬಾದಾಮಿಯ ಬ್ರಹ್ಮಪುರಿಯಲ್ಲಿ ೨,೦೦೦ ಬ್ರಾಹ್ಮಣರು ಇದ್ದರೆ, ಐಹೊಳೆಯಲ್ಲಿ (ಅಯ್ಯವೊಳೆ) ೫೦೦ ವಿದ್ವಾಂಸರ ಬ್ರಹ್ಮಪುರಿ ಇತ್ತು.

ಅಗ್ರಹಾರಗಳು ಕೇವಲ ಕರ್ನಾಟಕಕ್ಕೆ ಮಾತ್ರ ಸೀಮಿತವಾದ ವ್ಯವಸ್ಥೆಯಾಗಿರಲಿಲ್ಲ; ಕೌಟಿಲ್ಯನೂ ಅದನ್ನು ಕುರಿತಾಗಿ ಮಾತನಾಡಿದ್ದಾನೆ. ಕೆಲವು ಅಗ್ರಹಾರಗಳನ್ನು ಶಾತವಾಹನರು ಸ್ಥಾಪಿಸಿದರೆಂದು ತೋರುತ್ತದೆ. ಶಿವಮೊಗ್ಗ ಜಿಲ್ಲೆಯ ತಾಳಗುಂದವು ಅದರ ಪೈಕಿ ಒಂದಾಗಿದೆ. ಪ್ರಾಥಮಿಕ ಶಿಕ್ಷಣಕ್ಕಾಗಿ ಪ್ರತಿಯೊಂದು ಅಗ್ರಹಾರದಲ್ಲೂ ಶಾಲೆಯೊಂದು ಇರುತ್ತಿದ್ದು ಅಕ್ಕರಿಗವೃತ್ತಿ, ಬಾಲಶಿಕ್ಷೆ ಅಥವಾ ಕರ್ನಾಟಕಶಿಕ್ಷೆಗಳ ಉದ್ದೇಶಗಳಿಗಾಗಿ ವಿದ್ವಾಂಸನೊಬ್ಬನಿಗೆ ಭೂಮಿ ಅಥವಾ ಆರ್ಥಿಕ ಹೂಡಿಕೆಯ ವಿಶೇಷ ಕೊಡುಗೆಯನ್ನು ನೀಡಲಾಗುತ್ತಿತ್ತು. ಶಿಕ್ಷಕರನ್ನು ಕರ್ನಾಟ-ಪಂಡಿತ ಅಥವಾ ಕನ್ನಡ-ಉಪಾಧ್ಯಾಯ ಎಂದು ಕರೆಯಲಾಗುತ್ತಿತ್ತು. ಅಗ್ರಹಾರಗಳಲ್ಲಿ, ಬೋಧನೆಯ ವಿಷಯಗಳಲ್ಲಿ ವೇದ, ವೇದಾಂಗ, ವೇದಾಂತ, ಪುರಾಣ, ನ್ಯಾಯ, ಮೀಮಾಂಸೆ, ಆಗಮ, ಯೋಗಸೂತ್ರ, ನಾಟ್ಯಶಾಸ್ತ್ರ, ಕಾಮಸೂತ್ರ, ಜ್ಯೋತಿಷ್ಯ, ವ್ಯಾಕರಣ, ಗಣಿತ, ಭಾಷೆಗಳು, ರಾಜ್ಯ ನೀತಿ, ಇತ್ಯಾದಿಗಳು ಆಗಿದ್ದವು.

ಭಾರತದ ಬೇರೆಡೆಯಲ್ಲಿ ಇರುವಂತೆ, ಕರ್ನಾಟಕದ ಈ ಅಗ್ರಹಾರಗಳು ಪಾಂಡಿತ್ಯದ ಪರಂಪರೆಗಳ ಸಂರಕ್ಷಣೆಯನ್ನು ಮುಂದುವರಿಸಿದವು. ಶೃಂಗೇರಿ, ಉಡುಪಿ, ಗೋಕರ್ಣ, ಮೇಲುಕೋಟೆ, ಇತ್ಯಾದಿ ಧಾರ್ಮಿಕ ಕೇಂದ್ರಗಳು ಹಾಗೂ ನೂರಾರು ವೀರಶೈವ ಮಠಗಳು ಸಾಂಪ್ರದಾಯಿಕ ಕಲಿಕೆಯನ್ನು ಪೋಷಿಸುವುದನ್ನು ಮುಂದುವರಿಸಿದವು. ಜೈನ ಬಸದಿಗಳೂ ಈ ಸಂಪ್ರದಾಯವನ್ನು ಮುಂದುವರಿಸಿದವು.ಕ್ರಿ.ಶ.೧೬೨೩ರಲ್ಲಿ ಕರ್ನಾಟಕಕ್ಕೆ ಬಂದ ಇಟಾಲಿಯನ್ ಯಾತ್ರಿಕನು, ಮಗ್ಗಿಯ ಸುಶ್ರಾವ್ಯ ಪಠಣದ ಮೂಲಕ ಶಿವಮೊಗ್ಗ ಜಿಲ್ಲೆಯ ದೇವಾಲಯವೊಂದರಲ್ಲಿ ನಡೆಯುತ್ತಿದ್ದ ಶಾಲೆಯಲ್ಲಿ, ಗುಣಾಕಾರವನ್ನು ಕಲಿಯುತ್ತಿದ್ದ ಹುಡುಗರ ಸ್ವಾರಸ್ಯಕರವಾದ ವಿವರಣೆಯನ್ನು ನೀಡಿದ್ದಾನೆ. ಒಬ್ಬ ಹುಡುಗನು ಮಗ್ಗಿಗಳನ್ನು ಹಾಡಿ, ಅದನ್ನು ಇತರ ಹುಡುಗರು ಪುನರಾವರ್ತಿಸಿ, ಈ ರೀತಿಯಲ್ಲಿ ಆ ಪಾಠವನ್ನು ಕಲಿಯುತ್ತಿದ್ದು, ಮುಂದೆ ಹರಡಿದ ಮರಳಿನಲ್ಲಿ ಬೆರಳುಗಳಿಂದಲೂ ಬರೆಯುತ್ತಿದ್ದರು.

ಕ್ರಿ.ಶ.೧೧೫೦ರಲ್ಲಿ ದೊರೆತ ಶಾಸನವೊಂದು ಅಗ್ರಹಾರ ವ್ಯವಸ್ಥೆಯ ವಿವರಣೆಗಳನ್ನು ನೀಡಿ, ಎಂಟು ಶತಮಾನಗಳ ಕಾಲ, ಶಿವಮೊಗ್ಗ ಜಿಲ್ಲೆಯ ತಾಳಗುಂದ ಅಗ್ರಹಾರವು ಪ್ರಸಿದ್ಧ ಕಲಿಕಾ ಕೇಂದ್ರವಾಗಿತ್ತು.ವೇದಗಳು, ವೇದಾಂತ, ರೂಪಾವತಾರ (ವ್ಯಾಕರಣ), ಪ್ರಭಾಕರ (ಮೀಮಾಂಸ ಸಿದ್ಧಾಂತ) ಹಾಗೂ ಛಂದಸ್ ಶಾಸ್ತ್ರಗಳಂತಹ ವಿವಿಧ ವಿಷಯಗಳಿಗೆ ೪೮ ವಿದ್ಯಾರ್ಥಿಗಳು ಹಾಗೂ ಎಂಟು ಶಿಕ್ಷಕರು ಇದ್ದರು. ಪ್ರಾಥಮಿಕ ಮಟ್ಟದಲ್ಲಿ ಕನ್ನಡ ಬೋಧನೆ ಮಾಡುವ (ಕನ್ನಡ-ಅಕ್ಷರ-ಶಿಕ್ಷೆ) ವ್ಯವಸ್ಥೆ ಇತ್ತು.

ಅಗ್ರಹಾರಗಳ ಸ್ಥಾಪನೆಯಲ್ಲಿ ಕರ್ನಾಟಕದ ರಾಣಿಯರು ಮಹತ್ತರವಾದ ಪಾತ್ರವನ್ನು ವಹಿಸಿದರು. ಕದಂಬ ಅರಸ, ಶಿವಚಿತ್ತನ ಮಡದಿಯಾದ ರಾಣಿ ಕಮಲಾದೇವಿಯು ದೇಗಾವೆಯಲ್ಲಿ (ಬೆಳಗಾವಿ ಜಿಲ್ಲೆ) ಅಗ್ರಹಾರದ ಸ್ಥಾಪನೆ ಮಾಡಲು ಇಚ್ಛಿಸಿ ಸಭಾಭವನದಲ್ಲಿ ರಾಜನಿಗೆ ತನ್ನ ಇಚ್ಛೆಯನ್ನು ತಿಳಿಸಿದಳು.ಶಾಸನದ ಪ್ರಕಾರ, ಮಂತ್ರಿಮಂಡಲದ ಮುಂದೆ ರಾಜನು ಈ ಪ್ರಸ್ತಾವನೆಯನ್ನು ಮಂಡಿಸಿದಾಗ, ಅದನ್ನು ಅವರು ಒಪ್ಪಿಕೊಂಡರು.ವಿವಿಧ ವಿಷಯಗಳಲ್ಲಿ ನಿಷ್ಣಾತರಾದ ಹಲವಾರು ಬ್ರಾಹ್ಮಣರನ್ನು ಸ್ವತಃ ರಾಣಿಯೇ ಆಯ್ಕೆ ಮಾಡಿದಳು.ಅಗ್ರಹಾರದ ಸ್ಥಾಪನೆ ಹಾಗೂ ರಾಜಾಶ್ರಯಕ್ಕೆ ಯೋಗ್ಯರಾದ ಬ್ರಾಹ್ಮಣರನ್ನು ಮಾತ್ರ ನೇಮಕ ಮಾಡಿಕೊಳ್ಳುವ ಎಚ್ಚರವಹಿಸಲಾಯಿತೆಂದು ಶಾಸನವು ವಿವರಿಸುತ್ತದೆ.

## ಬ್ರಹ್ಮಪುರಿ ಹಾಗೂ ಮಠಗಳು

ಹೆಸರೇ ಸೂಚಿಸುವಂತೆ, ನಗರ ಅಥವಾ ಪಟ್ಟಣದ ಕೆಲವು ಭಾಗಗಳಲ್ಲಿ ಬ್ರಾಹ್ಮಣರಿಗೆಂದು ಮೀಸಲಿಟ್ಟ ಪ್ರದೇಶವನ್ನು ಬ್ರಹ್ಮಪುರಿ ಎಂದು ಕರೆಯುತ್ತಿದ್ದರು.ರಾಜರು ಹಾಗೂ ಸೇನಾಧಿಪತಿಗಳು ಪ್ರವಾಸದಲ್ಲಿದ್ದಾಗ, ಬ್ರಾಹ್ಮಣ ವಿದ್ವಾಂಸರ ಧರ್ಮ-ಪ್ರಸಂಗ ಅಥವಾ ಧಾರ್ಮಿಕ ಪ್ರವಚನಗಳನ್ನು ವ್ಯವಸ್ಥೆಗೊಳಿಸುತ್ತಿದ್ದರು.ಅವರಿಗೆ ಮೆಚ್ಚಿಗೆಯಾದರೆ, ದೇಣಿಗೆಗಳನ್ನು ನೀಡುತ್ತಿದ್ದು ಕೆಲವೊಮ್ಮೆ ನೂತನ ಬ್ರಹ್ಮಪುರಿಗಳನ್ನೂ ಸ್ಥಾಪಿಸುತ್ತಿದ್ದರು.ಪ್ರಾಥಮಿಕ ಹಾಗೂ ಉನ್ನತ ಮಟ್ಟಗಳೆರಡರಲ್ಲೂ ಶಿಕ್ಷಣವನ್ನು ನೀಡುತ್ತಿದ್ದ ಶಿವಮೊಗ್ಗ ಜಿಲ್ಲೆಯ ಬಳ್ಳಿಗಾವೆಯಲ್ಲಿ ಏಳು ಹಾಗೂ ಅಣ್ಣಿಗೇರಿಯಲ್ಲಿ ಐದು ಬ್ರಹ್ಮಪುರಿಗಳು ಇದ್ದವು.

ಅಮರಕೋಶದ ಪ್ರಕಾರ, ದೇವಾಲಯದ ಶಾಲೆ ಅಥವಾ ಮಠಛತ್ರಾದಿನಿಲಯಗಳಿಗೆ ಅಂಟಿಕೊಂಡಿದ್ದ ಭೋಜನ ಗೃಹಗಳನ್ನು ಮಠ ಎನ್ನುತ್ತಿದ್ದರು, ಆದರೆ, ಅದು ಕ್ರಿ.ಶ.೮ನೆಯ ಶತಮಾನದ ಮಧ್ಯಭಾಗದ ವೇಳೆಗೆ, ಕಲಿಕಾ ಕೇಂದ್ರವಾಗಿ ಬೆಳೆಯಿತು. ಕ್ರಿ.ಶ.೧೦ನೆಯ ಶತಮಾನದಲ್ಲಿ ಹಲವಾರು ಕಾಳಾಮುಖ ಮಠಗಳು ಅಸ್ತಿತ್ವಕ್ಕೆ ಬಂದವು. ದೇಶದಾದ್ಯಂತ ಶಿಕ್ಷಣವನ್ನು ಹರಡುವಲ್ಲಿ ಕಾಳಮುಖ ಶೈವರು ಪ್ರಮುಖ ಪಾತ್ರವನ್ನು ವಹಿಸಿದರು. ಸುಮಾರು ಕ್ರಿ.ಶ.ಏಳನೆಯ ಶತಮಾನದ ವೇಳೆಗೆ, ಕಾಶ್ಮೀರದಿಂದ ಅವರು ಕರ್ನಾಟಕಕ್ಕೆ, ಗುಜರಾತಿನ ಮೂಲಕ ಬಂದರು.ಇವರ ಹಣೆಯ ಮೇಲೆ ಭಸ್ಮವನ್ನು (ಪವಿತ್ರ ವಿಭೂತಿ) ಯಥೇಚ್ಛವಾಗಿ ಬಳಿದಿದ್ದರಿಂದ, ಅವರನ್ನು ಸ್ಥಳೀಯರು ಕಾಳಮುಖ ಅಥವಾ 'ಕರಿಯ ಮುಖ'ದವರೆಂಬ ಅಡ್ಡಹೆಸರಿನಿಂದ ಕರೆದರು.

ಸಮಾಜದ ವಿವಿಧ ಭಾಗಗಳಿಗೆ ಆಶ್ರಯ ನೀಡುತ್ತಿದ್ದ ಕೇದಾರೇಶ್ವರ ದೇವಾಲಯಕ್ಕೆ ಅಂಟಿಕೊಂಡಿದ್ದ ಅತ್ಯಂತ ಸುಪ್ರಸಿದ್ಧ ಮಠವು ಬಳ್ಳಿಗಾವಿಯ (ಶಿವಮೊಗ್ಗ ಜಿಲ್ಲೆ) ಕೋಡಿಮಠವಾಗಿತ್ತು.ವಿದ್ಯಾರ್ಥಿ ಸಮುದಾಯಕ್ಕೆ ಉಚಿತ ಶಿಕ್ಷಣ, ವಸತಿ ಹಾಗೂ ಊಟವನ್ನು ನೀಡುವುದರೊಂದಿಗೆ, ಕಲಿಕೆಯ ಎಲ್ಲಾ ಶಾಖೆಗಳಲ್ಲೂ ಮಠವು ಬೋಧನೆಯನ್ನು ನೀಡಿತು. ಬಡವರು, ನಿರಾಶ್ರಿತರು, ಕುಂಟರು, ಕುರುಡರು ಹಾಗೂ ಕಿವುಡರಿಗೆ ಮಠವು ಆಹಾರವನ್ನು ವಿತರಿಸುತ್ತಿತ್ತು. ಹಾಡುಗಾರರು, ನಗಾರಿ ನುಡಿಸುವವರು, ಕೊಳಲುವಾದಕರು, ನೃತ್ಯಗಾರರು ಹಾಗೂ ವಾಗ್ಗೇಯಕಾರರಂತಹ ಕಲಾವಿದರಿಗೂ ನೆರವು ಒದಗಿಸುವ ಮೂಲಕ, ಮಠವು ಕುಶಲ ಕಲೆಗಳ ಆಗರವೆಂದು ಸಾಬೀತುಪಡಿಸಿತು.

ಭಾರತದ ಇತರ ಭಾಗಗಳಿಂದ ಮಾತ್ರವಲ್ಲ, ವಿವಿಧ ದೇಶಗಳಿಂದಲೂ, ಏಕದಂಡಿ, ತ್ರಿದಂಡಿ, ಹಂಸ, ಪರಮಹಂಸರಂತಹ ವಿವಿಧ ವರ್ಗಗಳಿಗೆ ಸೇರಿದ ಸಾಧುಸಂತರು ಹಾಗೂ ಜೈನ ಮುನಿಗಳೂ ಸಹ ಈ ಮಹಾನ್ ಸಂಸ್ಥೆಗೆ ಭೇಟಿ ನೀಡಿದರು. ಮಠಕ್ಕೆ ಭೇಟಿ ನೀಡುವವರೆಲ್ಲರಿಗೂ ಆಸರೆ, ಆಹಾರ, ಸುರಕ್ಷತೆ ಒದಗಿಸಿ, ಅವರಿಗೆಲ್ಲ ವೈದ್ಯಕೀಯ ಚಿಕಿತ್ಸೆಗೂ ವ್ಯವಸ್ಥೆಯನ್ನು ಮಾಡಿದ್ದರು.

ಕೋಡಿಮಠವು ಪ್ರತಿಷ್ಠಿತ ಗುರುಗಳ ದೀರ್ಘ ಪರಂಪರೆಯನ್ನು ಪಡೆದಿರುವ ಹೆಗ್ಗಳಿಕೆಗೆ ಪಾತ್ರವಾಗಿತ್ತು. ಎರಡನೆಯ ವಾಮಶಕ್ತಿಯು ೪೬ ವರ್ಷಗಳಿಗೂ ಹೆಚ್ಚಿನ ಕಾಲ, ಈ ಸಂಸ್ಥೆಯ ಮುಖ್ಯಸ್ಥನಾಗಿದ್ದನು, ತನ್ನ ಆತನ ಪಾಂಡಿತ್ಯದ ಮೂಲಕ, ರಾಜವಂಶದವರ ಗಮನವನ್ನು ಸೆಳೆದನು, ತನ್ಮೂಲಕ ಅವರು ಕ್ರಿ.ಶ.೧೧ನೆಯ ಶತಮಾನದಲ್ಲಿ ಮಠಕ್ಕೆ ಧಾರಾಳವಾದ ದೇಣಿಗೆಗಳನ್ನು ನೀಡಿದರು. ಬಳ್ಳಿಗಾವಿಯಲ್ಲದೆ, ಕುಪ್ಪತ್ತೂರು, ಸೂಡಿ, ಹೂಲಿ, ಮುತ್ತಗಿ ಹಾಗೂ ಶ್ರೀಶೈಲಗಳಂತಹ ಸ್ಥಳಗಳಲ್ಲೂ ಸುಪ್ರಸಿದ್ಧ ಕಾಳಾಮುಖ ಮಠಗಳು ಇದ್ದವು.

ಎಲ್ಲ ಸಾಂಪ್ರದಾಯಿಕ ವಿದ್ಯೆಗಳಲ್ಲೂ ಸ್ವಾಧ್ಯಾಯ (ಸ್ವಂತ ಅಧ್ಯಯನ), ಅಧ್ಯಾಪನ (ಬೋಧನೆ) ವ್ಯಾಖ್ಯಾನಗಳೊಂದಿಗೆ (ಉಪನ್ಯಾಸ), ಕೆಲವು ಮಠಗಳು ವೃತ್ತಿಪರ ಶಿಕ್ಷಣವನ್ನೂ ಒದಗಿಸುತ್ತಿದ್ದವು. ಕೆಲವು ಮಠಗಳಲ್ಲಿ ಕೇವಲ ಓದುವುದು ಹಾಗೂ ಬರೆಯುವುದು (ಓದಿಸುವ–ಮಠ), ಕೆಲವು ನೂಲು ತೆಗೆಯುವಿಕೆ ನೇಯ್ಗೆ (ಸಾಲೆ–ಮಠ), ಹಾಗೂ ಮತ್ತೆ ಕೆಲವು ಕೃಷಿ, ಔಷಧ ಹಾಗೂ ಕಮ್ಮಾರಕಲೆ ಗಳಲ್ಲಿ ಬೋಧನೆಯನ್ನು ನೀಡುತ್ತಿದ್ದವು.ತಾಳೆಗರಿಗಳ ಮೇಲೆ ಚಿತ್ರ ಬಿಡಿಸುವುದು ಹಾಗೂ ಬಣ್ಣ ಹಚ್ಚುವುದು ಹಾಗೂ ಕಡತಗಳನ್ನು (ಮಡುಚುವ ಖಾಯಂ ಕಪ್ಪು ಹಲಗೆಗಳು) ತಯಾರಿಸುವುದನ್ನು ವಿದ್ಯಾರ್ಥಿಗಳಿಗೆ ಕಲಿಸಲಾಗುತ್ತಿತ್ತು. ಮಠಗಳಲ್ಲಿನ ಕೆಲವು ಪುರಾತನ ತಾಳೆಗರಿ ಪುಸ್ತಕ ಹಾಗೂ ಕಡತಗಳು, ವಿವಿಧ ಕಲೆಗಳು ಹಾಗೂ ಕುಶಲಕಲೆಗಳಲ್ಲಿ ಬೇಕಾದ ಅನೇಕ ಸಂಖ್ಯೆಯ ಸಲಕರಣೆಗಳು ಹಾಗೂ ಅವುಗಳನ್ನು ತಯಾರಿಸುವ ವಿಧಾನಗಳನ್ನು ವಿವರಿಸುತ್ತವೆ. ಕಾಲಾಂತರದಲ್ಲಿ, ವೀರಶೈವ ಸಂಸ್ಥೆಗಳಾದ ಕಾಳಮುಖ ಮಠಗಳು, ಜಾತ್ಯಾತೀತ ಶಿಕ್ಷಣದ ಸಂಪ್ರದಾಯವನ್ನು ಮುಂದುವರಿಸಿದವು.

ಸಾಹಿತ್ಯಕ ಶಿಕ್ಷಣವನ್ನು ಒದಗಿಸುವ ಮಠಗಳ ಪೈಕಿಯೂ, ವಿಶಿಷ್ಟತೆ ಇತ್ತು.ಉದಾಹರಣೆಗೆ, ಕೂಲಿಮಠದಲ್ಲಿ ತಪ್ಪದೆ ಮೂರು ವಿಷಯಗಳಾದ ಓದು, ಬರಹ ಹಾಗೂ ಅಂಕಗಣಿತದ ಬೋಧನೆಯು ನಡೆಯುತ್ತಿತ್ತು. ಮಠದಲ್ಲಿ ಶಬ್ದಮಣಿದರ್ಪಣ ವ್ಯಾಕರಣವು ಮುಖ್ಯ ವಿಷಯವಾಗಿತ್ತು. ಟೀಕಿನ ಮಠದಲ್ಲಿ ಸ್ಮೃತಿಗಳ (ಕಾನೂನು ಹಾಗೂ ತತ್ವ) ವಿವಿಧ ಭಾಷ್ಯಗಳನ್ನು ಕುರಿತಾಗಿ ಬೋಧನೆ ಮಾಡುತ್ತಿದ್ದು ಟಿಪ್ಪಣಿ ಮಠವು ಕಾನೂನಿನ ಪುಸ್ತಕಗಳ ವ್ಯಾಖ್ಯಾನ ಹಾಗೂ ವಿಶ್ಲೇಷಣೆಯಲ್ಲಿ ಜನರಿಗೆ ತರಬೇತಿ ನೀಡುತ್ತಿತ್ತು. ವ್ಯಾಖ್ಯಾನ ಹಾಗೂ ಸಂಕಲನವನ್ನು ಬೋಧನೆ ಮಾಡುತ್ತಿದ್ದ ಸಂಪಾದನೆ ಮಠವೂ ಸಹ ಬಹಳಷ್ಟು ಸಂಖ್ಯೆಯಲ್ಲಿ ಜನರನ್ನು ಆಕರ್ಷಿಸಿತು. ಶಾಸನಗಳಲ್ಲಿ ಹೆಸರಿಸಲಾದ ಸಂಜೆಯ ಮಠವು, ಕೇವಲ ಸಂಜೆಗಳಲ್ಲಿ ಕಾರ್ಯ ಮಾಡುತ್ತಿತ್ತು. ದೇವಾಲಯ–ಶಾಲೆಗಳಲ್ಲಿ ಸಾಮಾನ್ಯ ಆಚರಣೆಯಾದ ಪುರಾಣಗಳ ಪಠನವೂ ಇಲ್ಲಿ ಆಚರಣೆಯಲ್ಲಿತ್ತು.ಆ ಕಾಲದ ವಯಸ್ಕರ ಶಿಕ್ಷಣದ ಭಾಗವಾದ ಧರ್ಮ ಹಾಗೂ ಸಾಮಾಜಿಕ ಹೊಣೆಗಾರಿಕೆಗಳನ್ನು ಕುರಿತಾಗಿ ಭಕ್ತರು ಮಠಗಳಲ್ಲಿ ತಮ್ಮ ವಿರಾಮದ ಸಮಯದಲ್ಲಿ ಸೇರುತ್ತಿದ್ದರೆಂದು ತೋರುತ್ತದೆ.

ಅವಿಭಾಜ್ಯ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಜೈನ ಮಠ ಹಾಗೂ ಐಗಳ ಮಠಗಳು ಅಸ್ತಿತ್ವದಲ್ಲಿದ್ದು ೧೯ನೆಯ ಶತಮಾನದ ಅಂತ್ಯದವರೆಗೂ ಮುಂದುವರಿದವು. ಓದು, ಬರಹ ಹಾಗೂ ಅಂಕಗಣಿತಗಳ ಜೊತೆಯಲ್ಲಿ, ಕನ್ನಡ, ಸಂಸ್ಕೃತದ ಶ್ರೇಷ್ಠ ಸಾಹಿತ್ಯ ಹಾಗೂ ಯಕ್ಷಗಾನ ಪ್ರಸಂಗಗಳು, ಅಂದರೆ ಪ್ರಸಂಗಗಳ ಅಭಿನಯವನ್ನೂ ಬೋಧನೆ ಮಾಡಲಾಗುತ್ತಿತ್ತು.

ವೇದದ ಕಥೆಗಳು ಹಾಗೂ ಸಾಂಪ್ರದಾಯಿಕ ದರ್ಶನಗಳು ಹಾಗೂ ಸ್ಮೃತಿಗಳಲ್ಲದೆ, ಜಾತ್ಯಾತೀತ ವಿಷಯಗಳಾದ ಕಲೆ ಹಾಗೂ ಕುಶಲಕಲೆ ಗಳನ್ನು ಮಠಗಳಲ್ಲಿ ಬೋಧಿಸಲಾಗುತ್ತಿತ್ತು. ಈ ರೀತಿಯಲ್ಲಿ, ಆ ಕಾಲದ ಬಹುತೇಕ ಸ್ಥಳೀಯ ಶೈಕ್ಷಣಿಕ ಅಗತ್ಯಗಳನ್ನು ಮಠಗಳು ಪೂರೈಸಲು ಪ್ರಯತ್ನಿಸಿದವು. ಮಠಗಳ ಆಡಳಿತ ಹಾಗೂ ನಿರ್ವಹಣೆಯು ಆಯಾ ನಿರ್ದಿಷ್ಟ ಸಮುದಾಯಕ್ಕೆ ಸೇರಿದವರ ಹೊಣೆಗಾರಿಕೆಯಾಗಿತ್ತು. ಜೈನರು, ವೈಷ್ಣವರು, ವೀರಶೈವರು, ಮೊದಲಾದ ಸಮುದಾಯಗಳಿಗೆ ಸೇರಿದವರು ಆಯಾ ಮಠಗಳನ್ನು ನಡೆಸುತ್ತಿದ್ದರು, ಆದರೆ ಎಲ್ಲ ಸಮುದಾಯಗಳಿಗೂ ಶಿಕ್ಷಣವು ಲಭ್ಯವಾಗಿತ್ತು.

## ಕರ್ನಾಟಕದ ಮಹಿಳೆಯರು

ವೇದಗಳ ಕಾಲದಲ್ಲಿ ಲಿಂಗ ತಾರತಮ್ಯವು ಇರಲಿಲ್ಲವೆಂಬುದು ವಿಧಿತವಾದ ಸತ್ಯ. ಗುರುಕುಲ ಅಥವಾ ಆಶ್ರಮದಲ್ಲಿ ತಮ್ಮ ಅಧ್ಯಯನಗಳನ್ನು ಪ್ರಾರಂಭಿಸುವ ಮುನ್ನ, ಗಂಡು ಹಾಗೂ ಹೆಣ್ಣು ಮಕ್ಕಳಿಬ್ಬರಿಗೂ ಉಪನಯನ ಸಮಾರಂಭವನ್ನು ಆಚರಿಸಲಾಗುತ್ತಿತ್ತು. ಬಹುತೇಕ ಹುಡುಗಿಯರು ಆರಾಮವಾದ ಕುಟುಂಬ ಜೀವನದತ್ತ ಒಲವು ತೋರಿ ವಿವಿಧ ಕಲೆಗಳು ಹಾಗೂ ಕೌಶಲ್ಯಗಳನ್ನು ಕಲಿತು, ಒಳ್ಳೆಯ ಗೃಹಿಣಿಯರಾಗುತ್ತಿದ್ದರು. ಅವರನ್ನು ಸದ್ಯೋವಧುಗಳು ಎಂದು ಕರೆಯಲಾಗುತ್ತಿತ್ತು.ಗುರುಕುಲದಲ್ಲಿ ದೈವ ಸಾಕ್ಷಾತ್ಕಾರದ ಗಂಭೀರ ಅಧ್ಯಯನವನ್ನು ಕೈಗೊಂಡ ಕೆಲವರು ಕಲಿಕೆಯ ಎಲ್ಲ ರೀತಿಗಳಲ್ಲೂ ಉತ್ತಮವಾಗಿ ಹಾಗೂ ವಿಶೇಷವಾಗಿ ಬ್ರಹ್ಮನ್ ಸ್ವರೂಪ ಕುರಿತಾದ ವಾದಗಳಲ್ಲಿ ನಿಷ್ಣಾತರಾದರು. ಅವರನ್ನು ಬ್ರಹ್ಮವಾದಿನಿ ಎಂದು ಕರೆಯುತ್ತಿದ್ದು ಅವರನ್ನು ದಾರ್ಶನಿಕರು ಹಾಗೂ ಮಂತ್ರಗಳ ರಚನಕಾರರೆಂದು ಸ್ಮರಿಸಲಾಗುತ್ತದೆ.


ಶಾಸನ ಸುಂದರಿ, ಜಲಸಂಗಿ, ಬೀದರ್ ಜಿಲ್ಲೆ

ಕಟ್ಟಡ ನಿರ್ಮಾಣ ಕಲೆ, ಸಾಹಿತ್ಯ ಕಲೆ ಹಾಗೂ ಜ್ಞಾನದ ಪ್ರಚಾರದಲ್ಲಿ ಮಹಿಳೆಯರ ಪಾತ್ರವು ಕರ್ನಾಟಕದಲ್ಲಿ ಪುರುಷರಷ್ಟೇ ಗಣನೀಯವೆಂದು ತೋರುತ್ತದೆ. ಸಾಹಿತ್ಯಕ ಹಾಗೂ ಶಾಸನ ಗಳಲ್ಲಿ ದೊರೆಯುವ ಹೇರಳ ಸಾಕ್ಷಿ ಇದಕ್ಕೆ ಆಧಾರವಾಗಿದೆ. ಕಾಳಿದಾಸ ಹಾಗೂ ಭಾರವಿಗೆ ಹೋಲಿಕೆಯಲ್ಲಿ ಸಮನಾದ ರವಿಕೀರ್ತಿ ಎಂಬ ಕವಿತಾ ಹಾಗೂ ಇತರ ಕವಿಗಳು; ವಿದ್ವತ್-ಜನರು ಬಾದಾಮಿ ಚಾಲುಕ್ಯರ ಆಸ್ಥಾನವನ್ನು ಅಲಂಕರಿಸಿದ್ದರು. ಅವರ ಪೈಕಿ, ಉನ್ನತ ಮಟ್ಟದ ಕವಿ ಸಾಮರ್ಥ್ಯದಿಂದ ಕೂಡಿದಾಕೆ ಎಂದು ರಾಜಶೇಖರನಿಂದ ಹಾಡಿಹೊಗಳಲ್ಪಟ್ಟ ರಾಣಿ ವಿಜಯಾ ಇದ್ದಳು. ಜ್ಞಾನದ ಎಲ್ಲ ಶಾಖೆಗಳನ್ನು ಕುರಿತಾದ ಪರಿಜ್ಞಾನ ಹಾಗೂ ಅನೇಕ ಭಾಷೆಗಳ ವಿದ್ವತ್ ಹೊಂದಿದ್ದ ಆಕೆ, ಹೊಗಳಿಕೆಗೆ ಯೋಗ್ಯವಾದ ವರ್ಚಸ್ಸನ್ನು ಹೊಂದಿದ್ದಳು.ವಿಜಯಾಂಬಿಕ, ವಿದ್ಯಾ ಅಥವಾ ಬಿಜ್ಜಿಕ ಎಂದು ಕರೆಯಲ್ಪಡುವ ವಿಜಯಾ, ಎರಡನೆಯ ಪುಲಕೇಶಿಯ ಮಗ ಚಂದ್ರಾದಿತ್ಯನ ಪತ್ನಿ ಆಗಿದ್ದಿರಬಹುದು.

ಜೈನ ದೇವಾಲಯಗಳ ನಿರ್ಮಾಣ ಹಾಗೂ ವಿದ್ವಾಂಸರಿಗೆ ಪೊನ್ನನ ಶಾಂತಿಪುರಾಣದ ಸಾವಿರ ಪ್ರತಿಗಳ ಹಂಚಿಕೆಯ ಮೂಲಕ ಜೈನ ಮತದ ಪ್ರಚಾರವನ್ನು ಕ್ರಿ.ಶ.೧೧ನೆಯ ಶತಮಾನದಲ್ಲಿದ್ದ ರಾಣಿ ಅತ್ತಿಮಬ್ಬೆ ಮಾಡಿದ್ದು ಉಲ್ಲೇಖಾರ್ಹವಾಗಿದೆ. ಅತ್ತಿಮಬ್ಬೆಯನ್ನು ದಾನ-ಚಿಂತಾಮಣಿ ಎಂದು ಕರೆಯಲಾಗುತ್ತಿತ್ತು (ಉಡುಗೊರೆಗಳನ್ನು ನೀಡುವ ದೈವಿಕ ಒಡವೆ). ಸಾಧುತ್ವ, ಧಾರ್ಮಿಕ ಶ್ರದ್ಧೆ, ಉತ್ಸಾಹ ಹಾಗೂ ಸದಾಚಾರಕ್ಕಾಗಿ ಆಕೆಯು ಹೆಸರುವಾಸಿಯಾಗಿದ್ದಳು. ತನ್ನ ವಿಕ್ರಮಾಂಕದೇವಚರಿತಂನಲ್ಲಿ ಆರನೆಯ ವಿಕ್ರಮಾದಿತ್ಯನೊಂದಿಗೆ ಕರಾಡ್‌ನ ಶಿಲಹಾರ ಮುಖ್ಯಸ್ಥನ ಮಗಳಾದ ಚಂದ್ರಲೇಖಳ ಸ್ವಯಂವರವನ್ನು ಬಿಲ್ಹಣನು ಅವಿಸ್ಮರಣೀಯಗೊಳಿಸಿದ್ದಾನೆ, ಈ ಮಹಾನ್ ರಾಜಕುಮಾರಿಗೆ ಅಭಿನವ ಶಾರದೆ, ಸರಸ್ವತಿ, ಮುಂತಾದ ನೃತ್ಯ-ವಿದ್ಯಾಧರಿಗಳಿಂದ ಪ್ರಶಂಸೆಗಳು ಸಂದವು. ಕಲಿಕೆಯ ವಿವಿಧ ಶಾಖೆ ಹಾಗೂ ಕುಶಲ ಕಲೆಗಳಲ್ಲಿ ಪರಿಣತಿಯನ್ನು ಹೊಂದಿದ್ದಳೆಂದು ತಿಳಿದು ಬರುತ್ತದೆ. ಕಲ್ಯಾಣ ಚಾಳುಕ್ಯರ ಆಡಳಿತದಲ್ಲಿ, ಸಾಮ್ರಾಜ್ಯಶಾಹಿ ಕುಟುಂಬದ ಅನೇಕ ರಾಜಮನೆತನ ಅಥವಾ ಸಾಮಂತ ರಾಜಮನೆತನದ ಮಹಿಳೆಯರಾದ ಅಕ್ಕಾದೇವಿ, ಜಯಸಿಂಹ ಹಾಗೂ ಜಕ್ಕಲ ದೇವಿಯ ಸಹೋದರಿ, ನಾಲ್ಕನೆಯ ವಿಕ್ರಮಾದಿತ್ಯನ ರಾಣಿ, ಇವರೆಲ್ಲರೂ ಜ್ಞಾನ ಹಾಗೂ ಆಡಳಿತ ಕ್ಷೇತ್ರದಲ್ಲಿ ಮಾತ್ರವಲ್ಲದೆ, ರಣರಂಗದಲ್ಲೂ ತಮ್ಮ ಸ್ಥಾನವನ್ನು ಸ್ಥಾಪಿಸಿಕೊಂಡರು. ಪಂಪನು ಅಮರವಾಗಿಸಿದ ನೀಲಾಂಜನೆ ಹಾಗೂ ಹೊಯ್ಸಳ ರಾಣಿಯಾದ ಶಾಂತಲಾದೇವಿಯನ್ನು ಕುರಿತಾಗಿ, ಕಲೆ, ಸಂಗೀತ ಹಾಗೂ ನೃತ್ಯಗಳ ಅತ್ಯಂತ ಮಹಾನ್ ಪ್ರತಿಪಾದಕರೆಂದು ಶಾಸನಗಳು ಸಾರಿವೆ. ಹಲವಾರು ಗಂಗ ಹಾಗೂ ಹೊಯ್ಸಳ ರಾಜಕುಮಾರಿಯರು ತಮ್ಮ ಕುಶಲ ಕಲಾದಕ್ಷತೆಗೆ ಹೆಸರುವಾಸಿಯಾಗಿದ್ದರು.

ಕ್ರಿ.ಶ.೧೦ನೆಯ ಶತಮಾನದಲ್ಲಿ ತನ್ನ ಪತಿಯ ಮರಣದ ನಂತರ, ನಾಡಗಾವುಂಡನ ಪದವಿಗೆ ಪತ್ನಿಯು ಉತ್ತರಾಧಿಕಾರಿಯಾಗತ್ತಿದ್ದು, ಆಕೆಯ ಮರಣದ ನಂತರ, ಈ ಪದವಿಯು ಆಕೆಯ ಮಗಳಿಗೆ ಸೇರುತ್ತಿತ್ತು. ಮಹಿಳೆಯರು ಆಡಳಿತಗಾರರಾಗಿ ನೇಮಕಗೊಳ್ಳುತ್ತಿದ್ದು ರಾಜಮನೆತನದ ಅನೇಕ ಮಹಿಳೆಯರನ್ನು ರಾಜ್ಯಪಾಲರ ಹುದ್ದೆಗೆ ನೇಮಕ ಮಾಡಲಾಗುತ್ತಿತ್ತು. ತನ್ನ ಭಾವನಾದ ಒಂದನೆಯ ಚಾಲುಕ್ಯ ವಿಕ್ರಮಾದಿತ್ಯನ ಅಡಿಯಲ್ಲಿ, ವಿಜಯಾಂಕ ಪ್ರಾಂತ್ಯವೊಂದರ ಆಡಳಿತವನ್ನು ವಹಿಸಿಕೊಂಡಿದ್ದ ಅವಳು ರಣಭೈರವಿ ಎಂಬ ಹೆಸರಿನಿಂದಲೂ ಕರೆಯಲ್ಪಡುತ್ತಿದ್ದಳು. ಹೊಯ್ಸಳ ರಾಣಿಯಾದ ಉಮಾದೇವಿಯು ಸೈನ್ಯಗಳ ಮುಂದಾಳತ್ವವನ್ನು ವಹಿಸಿ, ಯುದ್ಧಗಳನ್ನು ಗೆದ್ದಳು. ಕ್ರಿ.ಶ.೧೩ನೆಯ ಶತಮಾನದಲ್ಲಿ, ಅಳುಪ ರಾಜ್ಯವನ್ನು ಬಲ್ಲಮಹಾದೇವಿಯು ಸ್ವತಂತ್ರವಾಗಿ ಆಳಿದಳು. ನಂತರ, ಪಶ್ಚಿಮ ಕರಾವಳಿಯಲ್ಲಿ ಮಹಿಳಾ ಸಂತತಿಯ ಮೂಲಕ ಉತ್ತರಾಧಿಕಾರತ್ವ ಅಥವಾ ಅಳಿಯ-ಸಂತಾನವು ಜನಪ್ರಿಯವಾದಾಗ, ವೀರೋಚಿತ ರಾಣಿಯರಾದ ಉಲ್ಲಾಳದ ಅಬ್ಬಕ್ಕ, (ಪೋರ್ಚುಗೀಸ್‌ರ ವಿರುದ್ಧ ಹೋರಾಡಿದವಳು) ಹಾಗೂ ಗೇರುಸೊಪ್ಪೆಯ ಚೆನ್ನಾದೇವಿ

ಚೆನ್ನಭೈರಾದೇವಿಯರು ಆಳಿದರು.ಪೋರ್ಚುಗೀಸರು ಚೆನ್ನಭೈರಾದೇವಿಯನ್ನು 'ಮೆಣಸಿನ ರಾಣಿ' ಎಂದೇ ಕರೆಯುತ್ತಿದ್ದರು.

ದೇಶದ ಇತರೆಡೆಗಳಿಗಿಂತ, ಕರ್ನಾಟಕದ ಮಹಿಳೆಯರು ಹೆಚ್ಚಿನ ಸ್ವಾತಂತ್ರವನ್ನು ಅನುಭವಿಸಿದರು. ಹಾಸನ ಜಿಲ್ಲೆಯಲ್ಲಿ ದೊರೆತ ಕ್ರಿ.ಶ.೧೧೫೬ರ ದಾಖಲೆಯೊಂದರ ಪ್ರಕಾರ ಮಹಿಳೆಯರಿಗೆ ಆಸ್ತಿಯ ಉತ್ತರಾಧಿಕಾರತ್ವ, ಅದನ್ನು ಉಯಿಲು ಬರೆ ಯುವುದು ಹಾಗೂ ಸಾಕ್ಷಿಗಳಾಗಿ ನಿಲ್ಲುವುದನ್ನು ಮಾಡಬಹುದಾಗಿತ್ತು. ವಿಜಯನಗರದ ಕಾಲದಲ್ಲಿ, ಅರಮನೆಯಲ್ಲಿ ಕಾವಲುಗಾರರು ಹಾಗೂ ಪಲ್ಲಕ್ಕಿ ಹೊರುವವರಾಗಿಯೂ ಕೆಲಸ ಮಾಡುತ್ತಿದ್ದರು. ಮಹಿಳಾ ಕುಸ್ತಿಪಟುಗಳು ಇದ್ದರೆಂಬ ಸಾಕ್ಷಿಯೂ ಇದೆ. ರಾಜಧಾನಿಯಲ್ಲಿ ಹಲವಾರು ಮಹಿಳೆಯರು ವ್ಯಾಪಾರದಲ್ಲಿ ತೊಡಗಿದ್ದರು. ಭಾರತದ ಪ್ರತಿಷ್ಠಿತ ಚರಿತ್ರಕಾರರಾದ ಡಾ.ಬಿ.ಎ.ಸಾಲೆತೋರ್‌ರವರ ಪ್ರಕಾರ, "ದಕ್ಷಿಣ ಭಾರತದ ಮಹಿಳೆಯರು, ಗೃಹ ಜೀವನಕ್ಕೆ ಪೂರಕವಾದ ಚಟುವಟಿಕೆಗಳಿಗೆ ಸಂಬಂಧಿಸಿದಂತೆ, ಕಾನೂನು ರೂಪಿಸುವವರು ವಿಧಿಸಿದ ಎಲ್ಲೆಗಳನ್ನು ಬಹುಪಾಲು ಮೀರಿ ಬೆಳೆದಿದ್ದರು," ಎಂದಿದ್ದಾರೆ.ಕರ್ನಾಟಕದ ಮಹಿಳೆಯರ ಪಾಲಿಗೂ ಇದು ಸತ್ಯ.

ಕೆಳ ಜಾತಿಗಳಲ್ಲಿ ವಿಧವಾ ವಿವಾಹವು ಸಾಮಾನ್ಯವಾಗಿತ್ತು.ಬಹುಪತ್ನಿತ್ವವು ಇದ್ದರೂ, ಬಹುತೇಕ ಅದು ರಾಜರು ಹಾಗೂ ಸ್ಥಿತಿವಂತರಲ್ಲಿ ಪ್ರಚಲಿತವಿತ್ತು.ಆಭರಣಗಳನ್ನು ಧರಿಸಿದ ಮಗಳ ಮದುವೆ ಮಾಡುವುದು ಅಥವಾ ಸಾಲಂಕೃತ–ಕನ್ಯಾದಾನವು ಸಾಮಾನ್ಯ ವಾಡಿಕೆಯಾಗಿದ್ದು ನಂತರ ಇದು ವರದಕ್ಷಿಣೆಯಾಗಿ ಮಾರ್ಪಾಡು ಹೊಂದಿತು.ಮದುಮಗಳ ದರವನ್ನು ನೀಡುವ ದುಷ್ಟ ವಾಡಿಕೆಯೂ ಇದ್ದು ವಿಜಯನಗರ ಕಾಲದ ದಾಖಲೆಯೊಂದು, ಈ ಆಚರಣೆಯ ವಿರುದ್ಧ ತಮ್ಮನ್ನು ತಾವು ಸಮರ್ಥಿಸಿಕೊಳ್ಳಲು ಹಲವಾರು ಬ್ರಾಹ್ಮಣರ ಸಮಾಲೋಚನೆಯು ನಡೆಯಿತೆಂದು ಹೇಳುತ್ತದೆ. ಸಾಹಿತ್ಯಕ ಮೂಲಗಳ ಪ್ರಕಾರ, ವೇಶ್ಯೆಯರು ಎಲ್ಲ ಪಟ್ಟಣ ಹಾಗೂ ನಗರಗಳಲ್ಲೂ ಇದ್ದರು. ರಾಜರು ತಮ್ಮನ್ನು ಹೆಮ್ಮೆಯಿಂದ ವೇಶ್ಯಾಭುಜಂಗ ಹಾಗೂ ವೀತಚಕ್ರವರ್ತಿ ಎಂದು ಕರೆದುಕೊಳ್ಳುವ ಮೂಲಕ, ಈ ವೃತ್ತಿಯು ರಾಜಾಶ್ರಯವನ್ನು ಪಡೆದಿತ್ತೆಂದು ಸೂಚಿಸುತ್ತದೆ. ದೇವಾಲಯಗಳಿಗೆ ನರ್ತನ ಮಾಡುವ ಕನ್ಯೆಯರನ್ನು ಹಾಗೂ ಚೌರಿ ಹೊರುವವರಂತಹ ಇತರ ಸ್ತ್ರೀ ಪರಿಚಾರಕರನ್ನು ಒದಗಿಸಲಾಗಿತ್ತು. ನರ್ತನ ಮಾಡುವವರನ್ನು ಕುಣಿಯುವ ಸೂಳೆ ಎಂದು ಕರೆದರೆ, ಚೌರಿ ಹೊರುವ ಮಹಿಳೆಯರನ್ನು ಚಾಮರದ ಸೂಳೆ ಎಂದು ಕರೆಯುತ್ತಿದ್ದರು.



ಸವಿನಿರ್ಮಡಿ ಸ್ಮಾರಕ, ಬೆಂಗಳೂರು ವಸ್ತು ಸಂಗ್ರಹಾಲಯ

ಮಧ್ಯಕಾಲೀನ ಕರ್ನಾಟಕದ ಮಹಿಳೆಯರು ಧಾರ್ಮಿಕ, ರಾಜಕೀಯ ಹಾಗೂ ಸಾಮಾಜಿಕ ವಲಯಗಳಲ್ಲಿ ಗೌರವಯುತ ಸ್ಥಾನಗಳನ್ನು ಅಲಂಕರಿಸಿ, ಪ್ರಮುಖ ಪಾತ್ರಗಳನ್ನು ನಿರ್ವಹಿಸಿ, ಕರ್ನಾಟಕದ ಸಂಸ್ಕೃತಿಗೆ ಗಣನೀಯ ಕೊಡುಗೆಯನ್ನು ನೀಡಿರುವ ಅಂಶವನ್ನು ಶಿಲಾಶಾಸನಗಳು ಸ್ಪಷ್ಟವಾಗಿ ವಿವರಿಸುತ್ತದೆ. ಆದರೆ, ೧೨ನೆಯ ಶತಮಾನದ ನಂತರದ ಭಾಗದವರೆಗೂ, ಅನನ್ಯ ಯೋಗಿನಿ ಹಾಗೂ ವಚನಕಾರ್ತಿಯಾದ ಅಕ್ಕಮಹಾದೇವಿ ಹಾಗೂ ಇತರ ವಚನಕಾರ್ತಿಯರು ಬರುವವರೆಗೂ, ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಪ್ರಮುಖವಾಗಿ ಮಹಿಳೆಯರು ಕಾಣಿಸಿಕೊಳ್ಳಲಿಲ್ಲ. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ವಚನಕಾರ್ತಿಯರ ಪೈಕಿ, ಅಕ್ಕಮಹಾದೇವಿಗೆ ತನ್ನದೇ ಆದ ತೇಜಸ್ಸು ಇತ್ತು. ಆಕೆಯು 'ಕರ್ನಾಟಕದ ಸಿಸ್ಟರ್ ಸುಪೀರಿಯರ್' ಹಾಗೂ 'ಭಾರತದ ಅತ್ಯಂತ ಪ್ರಮುಖ ಯೋಗಿನಿ' ಆಗಿದ್ದಳು.

ಕಲ್ಯಾಣದ ಕಳಚುರಿ ಬಿಜ್ಜಳನ ಆಸ್ಥಾನದಲ್ಲಿ ಬಸವೇಶ್ವರನ ಸಮಕಾಲೀನ ಮಹಿಳಾ ಸಂತಳಾದ ಅಕ್ಕ ಮಹಾದೇವಿಯು, ಚನ್ನ ಮಲ್ಲಿಕಾರ್ಜುನನ ಮಹಾನ್ ಭಕ್ತೆಯಾಗಿದ್ದಳು. ಚನ್ನನ ದಯೆಯನ್ನು ಪಡೆದ ಮಂದಿಯು, ದೈಹಿಕ ಅವಶ್ಯಕತೆಗಳಿಗೆ ಚಿಂತೆ ಮಾಡುವ ಅಗತ್ಯವಿಲ್ಲ ಎಂದು ಅಕ್ಕ ನಂಬಿದ್ದಳು.ತನ್ನ ಸ್ವಾಮಿಯ ಸಲುವಾಗಿ ಅಂತ್ಯವಿಲ್ಲದ ಹಾಗೂ ನಿರಂತರ ಯಾತನೆಯನ್ನು ಅನುಭವಿಸಲು ದೇಹವನ್ನು ದಂಡಿಸಲು ಅಕ್ಕ ಸಿದ್ಧಳಾಗಿದ್ದಳು. ಅಕ್ಕನಿಗೆ, ಚನ್ನಮಲ್ಲಿಕಾರ್ಜುನನಿಲ್ಲದ ಮಾತು ಕೃತಿ ಹಾಗೂ ಸ್ವಾತಂತ್ರವು ಭ್ರಮೆ. ಆತನು ಸರ್ವಾಂತರ್ಯಾಮಿಯೆಂದು ನಾವು ಕಂಡುಕೊಂಡರೆ, ಮೋಕ್ಷವನ್ನು ಪಡೆಯಬಹುದು ಎಂಬುದನ್ನು ಕಂಡುಕೊಂಡಿದ್ದಳು.

ಆಧ್ಯಾತ್ಮಿಕ ಹಾಗೂ ಸಾಹಿತ್ಯಕ ವಲಯಗಳಲ್ಲಿ ಅಕ್ಕ ಮಹಾದೇವಿಯು ಅನರ್ಘ್ಯ ರತ್ನ. ಅಕ್ಕ ಮಹಾದೇವಿ ಎಂಬ ಆಕೆಯ ಹೆಸರು ಅನ್ವರ್ಥದಾದುದು – ಅಕ್ಕ ಎಂದರೆ ಹಿರಿಯಕ್ಕ, ಹಾಗೂ ಮಹಾದೇವಿ ಎಂದರೆ

ಮಹಾನ್ ಆತ್ಮ ಎಂದು.ಸಾಹಿತ್ಯ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿ ಆಕೆಯು ನೀಡಿದ ಅಮೂಲ್ಯ ಕೊಡುಗೆ, ಸಾರೋಕ್ತಿಗಳು  ಎಂದೆಂದಿಗೂ ಪೂಜನೀಯವಾದ ವಚನಗಳೆಂಬ ಅದ್ಭುತವಾದ ಕೃತಿಗಳು.ಸಂಸಾರ ಸಾಗರವನ್ನು ದಾಟಲು ಮನುಷ್ಯನಿಗೆ ಮಾರ್ಗದರ್ಶನ, ಜ್ಞಾನ ಹಾಗೂ ಅನುಭಾವಗಳೆಂಬ ದಾರಿ ದೀವಿಗೆಗಳು ಮಾನವರಿಗೆ ಸೇವೆ ಸಲ್ಲಿಸುತ್ತದೆ.ಸಾಮಾನ್ಯ ಜನರಿಗೆ ಚಿರಪರಿಚಿತವಾದ ವಿಷಯ ಹಾಗೂ ಭಾಷೆಗಳನ್ನು ಬಳಸಿ, ಅತ್ಯಂತ ಸರಳ ಹಾಗೂ ಚುಟುಕಾದ ವಾಕ್ಯಗಳಲ್ಲಿ, ಅಕ್ಕನು ಸ್ಪಷ್ಟವಾಗಿ ಎದ್ದುಕಾಣುವ ಹಾಗೆ, ಆಳವಾದ ವ್ಯಾವಹಾರಿಕ ತತ್ವಜ್ಞಾನವನ್ನು ವಿವರಿಸಿದ ರೀತಿಯು, ಎಲ್ಲರಿಗೂ ಸುಲಭವಾಗಿ ಅರ್ಥವಾಗುವಂತಿದೆ. ಸಗುಣ ಹಾಗೂ ನಿರ್ಗುಣ ಬ್ರಹ್ಮನಾದ ದೇವನ ಸರ್ವಶಕ್ತಿ, ಸರ್ವಜ್ಞತೆ  ಹಾಗೂ ವಿಶ್ವವ್ಯಾಪಕತೆ ಯನ್ನು ಆಕೆಯು ಸ್ಫುಟವಾಗಿ ವಿವರಿಸಿದ್ದಾಳೆ.

## ನಿತ್ಯ ಜೀವನದಲ್ಲಿ ಕುಶಲಕಲೆಗಳು

ನೃತ್ಯ, ಹಾಡು, ಹಾಗೂ ಸಂಗೀತ ವಾದ್ಯಗಳಂತಹ ಕುಶಲ ಕಲೆಗಳನ್ನು ಮಹಾನ್ ಸಾಧನೆಗಳೆಂದು ಕುಲೀನ ಮನೆತನಗಳ ಮಹಿಳೆಯರಲ್ಲಿ ಪರಿಗಣಿಸಲಾಗುತ್ತಿತ್ತು.ಹಿಂದೆ ಬಳಕೆಯಲ್ಲಿದ್ದ ಸಂಗೀತ ವಾದ್ಯಗಳೆಂದರೆ, ಕೊಳಲು, ಸಮುದ್ರಘೋಷ, ಕಟು–ಮುಖ, ವಾದಿತ್ರ (ಒಂದು ರೀತಿಯ ದುಂಧುಬಿ) ಹಾಗೂ ವಾದ್ಯಗಳಾದ ತಂತ್ರಿ, ತಾಳ, ನಕರ, ಬಿಜೆ, ಝಾಂಝ್, ತುರ್ಯ, ವೀಣ ಹಾಗೂ ಮದ್ದಲೆ–ಮೃದಂಗಗಳು ಇದ್ದವು.

ಹಾಡುಗಾರಿಕೆ, ಮೃದಂಗ–ಮದ್ದಲೆ ವಾದನ ಹಾಗೂ ವಾದ್ಯ ಸಂಗೀತಗಳೊಂದಿಗೆ ನೃತ್ಯವನ್ನು ಮಾಡಲಾಗುತ್ತಿತ್ತು. ವಿವಿಧ ರೀತಿಯ ನೃತ್ಯಗಳಾದ ಭಾರತಿ, ಸಾತ್ವಕಿ, ಕೈಶಿಕಿ, ಹಾಗೂ ಅರಭಟೆಗಳಲ್ಲಿನ ನೈಪುಣ್ಯತೆಯನ್ನು ಹೆಗ್ಗಳಿಕೆಯ ಗುರುತೆಂದು ಪರಿಗಣಿಸಲಾಗುತ್ತಿತ್ತು. ಬೂಚಲಾದೇವಿಯೆಂಬ ಪರಿಪೂರ್ಣ ನರ್ತಕಿಯು ತನ್ನ ನೃತ್ಯದ ಮೂಲಕ ರಾಜನನ್ನು ಆಕರ್ಷಿಸಿ, ಪತ್ರಜಗದ್ದಳೆ (ನರ್ತಕಿಯರ ಲೋಕದ ಮುಖ್ಯಸ್ಥೆ) ಎಂಬಂತಹ ಬಿರುದು ಪಡೆದಿದ್ದಳು.ಸಂಗೀತ, ನೃತ್ಯ ಹಾಗೂ ಅಲಂಕಾರಿಕ ಕಲೆಗಳ ಆಶ್ರಯದಾತರು ಉತ್ತೇಜಕರಾದ ರಾಜರು ಹಾಗೂ ಸಿರಿವಂತರಿಂದ ತುಂಬಿರುತ್ತಿದ್ದ ಆಸ್ಥಾನಗಳು ಹಾಗೂ ದೇವಾಲಯಗಳಲ್ಲಿ ಕಲ್ಲು ಹಾಸಿನ ನರ್ತನ ಶಾಲೆಗಳನ್ನು ನಿರ್ಮಿಸಲಾಗುತ್ತಿತ್ತು.

ಕುಲೀನ ಮನೆತನಗಳ ಮಹಿಳೆಯರಿಗೆ ಚಿತ್ರಕಲೆ ಹಾಗೂ ಅಲಂಕಾರಗಳು (ಆಲೇಕ್ಯ ಕ್ರಮ) ಹಾಗೂ ಕುಂಚ ಹಾಗೂ ಸೂಜಿಯ ಬಳಕೆಯನ್ನೂ ಬೋಧಿಸಲಾಗುತ್ತಿತ್ತು.ಚಿತ್ರಕಲೆಯಲ್ಲಿ, ವ್ಯಕ್ತಿ ಚಿತ್ರಗಳನ್ನು ಬಿಡಿಸುವುದು ಜನಪ್ರಿಯವಾಗಿತ್ತು, ಏಕೆಂದರೆ ಅವು ಅಭಿವ್ಯಕ್ತತೆಯ ಸ್ವರೂಪ, ಆವಿರ್ಭಾವಗಳ ಮರುಕಳಿಕೆ ಹಾಗೂ ವ್ಯಕ್ತಿತ್ವಗಳ ವರ್ಣನೆಯೂ ಆಗಿದ್ದು, ವ್ಯಕ್ತಿಗಳ ಗುರುತನ್ನು ಸ್ಥಾಪಿಸುವ ಯತ್ನವನ್ನು ಮಾಡಿತು. ಕೆಮ್ಮಣ್ಣಿನ ಚಪ್ಪಡಿ ಅಥವಾ ಮರದ ಚೂರುಗಳಿಂದ ತಯಾರಾದ ಮಾಧ್ಯಮಗಳ ಲೇಪನವನ್ನು ಮಾಡಿದ ಚಿತ್ರ–ಫಲಕಗಳನ್ನು ಚಿತ್ರರಚನೆಗಾಗಿ ಬಳಸಲಾಗುತ್ತಿತ್ತು. ಅಜಂತಾ ಚಿತ್ರಾಲಂಕಾರಗಳ ಹಿಂದಿನ ಚಿಂತನೆ, ಅಭಿವ್ಯಕ್ತತೆ, ಪರಿಪೂರ್ಣ ಲಾವಣ್ಯ ಹಾಗೂ


ಡೊಳ್ಳುಕುಳಿತ

ಸಾಮಗ್ರಿಗಳ ಮೇಲಿನ ಸಂಪೂರ್ಣ ನೈಪುಣ್ಯವು, ದೇಶದ ಶತಮಾನಗಳ ಕಲಾತ್ಮಕ ಅಭಿವೃದ್ಧಿಗೆ ಸಾಕ್ಷಿಗಳಾಗಿ ನಿಂತಿವೆ. ಪ್ರಾಣಿ, ಪಕ್ಷಿ ಹಾಗೂ ಮಾನವ ದೃಶ್ಯಗಳನ್ನು ಪ್ರತಿನಿಧಿಸುವ ಚಿತ್ರಗಳಿಗೆ, ಕಲಾವಿದರು ತಮ್ಮ ಸುತ್ತಲಿರುವ ಮಾನವ ಹಾಗೂ ಪ್ರಾಣಿ ಜೀವನದಿಂದ ಸ್ಫೂರ್ತಿಯನ್ನು ಪಡೆದರು.

## ಪೋಷಾಕು ಹಾಗೂ ಆಭರಣಗಳು

ಜನರ ಪೋಷಾಕು ಹಾಗೂ ಆಭರಣಗಳಿಗೆ ಸಂಬಂಧಿಸಿದಂತೆ, ಭೂತ-ವರ್ತಮಾನಗಳ ನಡುವೆ ಅಂತಹ ವ್ಯತ್ಯಾಸವೇನೂ ಇಲ್ಲ. ಮಾನಸೋಲ್ಲಾಸ ಎಂಬ ಕ್ರಿ.ಶ. ೧೨ನೆಯ ಶತಮಾನದ ಸಂಸ್ಕೃತ ವಿಶ್ವಕೋಶದಲ್ಲಿ ಈ ವಿಷಯವನ್ನು ಕುರಿತಾದ ಅಧ್ಯಾಯವು ರತ್ನಪರೀಕ್ಷೆ ಅಥವಾ ಬೆಲೆಬಾಳುವ ರತ್ನಗಳ ಮೌಲ್ಯೀಕರಣದೊಂದಿಗೆ ಪ್ರಾರಂಭವಾಗುತ್ತದೆ. ವಜ್ರಗಳನ್ನು ಅದು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಹಾಗೂ ಶೂದ್ರ ಎಂದು ವಿಂಗಡಿಸಿದ್ದು, ಮೊದಲನೆಯದು ಬಿಳಿ, ಎರಡನೆಯದು ಕೆಂಪು, ಮೂರನೆಯದು ಹಳದಿಯ ಛಾಯೆ ಹಾಗೂ ಕೊನೆಯದು ಕಪ್ಪು ಬಣ್ಣವನ್ನು ಹೊಂದಿತ್ತು.ಮಹಿಳೆಯರು ಆಲದ ಮರದ ಎಲೆಯನ್ನು ಹೋಲುವ ಹಂಸತಿಲಕವನ್ನು ತಮ್ಮ ಬೈತಲೆಯ ಮೇಲೆ, ಮುತ್ತಿನ ಓಲೆಗಳು (ಮುಕ್ತ ತಡಕ), ಕುಂಡಲ, ಇತ್ಯಾದಿ ಹಾಗೂ ಮುಕ್ತಾವಳಿ (ಮುತ್ತಿನ ಮಣಿಗಳ), ವರ್ಣಸರ (ಪಚ್ಚೆ, ಕೆಂಪು ಹಾಗೂ ಮುತ್ತಿನ) ಸರಗಳು ಹಾಗೂ ಏಕಾವಳಿಗಳೆಂಬ ಒಂದು, ಎರಡು ಅಥವಾ ಹೆಚ್ಚಿನ ಮಾಲೆಗಳ ಸರಗಳನ್ನು ಧರಿಸುತ್ತಿದ್ದರು. ಕೆಲವೊಮ್ಮೆ ತೊಡೆಯವರೆಗೂ ತಲಪುವ ಕಟಿಸೂತ್ರ ವಾದ ಕಂಚಿದಾಮವೂ ಬಳಕೆಯಲ್ಲಿತ್ತು. ಕಡಗ, ಬಳೆ, ಉಂಗುರ (ಒಂದು, ಎರಡು ಅಥವಾ ಅನೇಕ ಅನರ್ಘ್ಯ ರತ್ನಗಳಿಂದ ಖಚಿತವಾದುದು) ಹಾಗೂ ಅಂದುಕ ಅಥವಾ ಕಡಗದಂತಹ (ಗೆಜ್ಜೆ) ಇತರ ಆಭರಣಗಳನ್ನು ಮಹಿಳೆಯರು ಧರಿಸುತ್ತಿದ್ದರು ಎಂದು ಈ ಸಂಸ್ಕೃತ ಕೃತಿಯಲ್ಲಿ ಬಣ್ಣಿಸಲಾಗಿದೆ. ಮೂಗುತಿಗಳು ಜನಪ್ರಿಯತೆಯನ್ನು ಪಡೆದದ್ದು ನಂತರದ ಶತಮಾನಗಳಲ್ಲಿ ಎಂದು ತೋರುತ್ತದೆ. ಪುರುಷರೂ ಸಹ ಇದೇ ರೀತಿಯ ಆಭರಣಗಳನ್ನು ಧರಿಸಿ, ಮಹಿಳೆಯರೊಂದಿಗೆ ಪೈಪೋಟಿ ನಡೆಸುತ್ತಿದ್ದರು. ಬಡವರು ಬೆಳ್ಳಿಯಲ್ಲಿ ಮಾಡಿದ ಅದೇ ರೀತಿಯ ಆಭರಣಗಳನ್ನು ಧರಿಸುತ್ತಿದ್ದರು. ಈ ವಿಷಯವನ್ನು ಕುರಿತಾದ ಮಾಹಿತಿ ಮೂಲತ: ಕನ್ನಡದ ಸಾಹಿತ್ಯಕ ಕೃತಿ ಹಾಗೂ ಶಿಲ್ಪಗಳಲ್ಲಿವೆ.


Traditional Mysore painting

ಪುರುಷರು ಧೋತಿ ಅಥವಾ ಪಂಚೆ, ಪಕ್ಕದಲ್ಲಿ ಗುಂಡಿಗಳಿರುವ (ಬಗಲು ಬಂದಿ) ಷರ್ಟು (ಅಂಗಿಕಗಳು) ಹಾಗೂ ಟರ್ಬನ್ ಅಥವಾ ಟೋಪಿಗಳನ್ನು (ಕುಲಾವಿ) ಧರಿಸುತ್ತಿದ್ದರು.ಮಹಿಳೆಯರು ಸೀರೆ ಹಾಗೂ ಕುಪ್ಪಸಗಳನ್ನು ಧರಿಸಿದರು. ರೇಶ್ಮೆ ಸೀರೆಗಳು ಶ್ರೀಮಂತರಲ್ಲಿ ಜನಪ್ರಿಯವಾಗಿದ್ದು ಲತಾವಳಿ, ಪುಷ್ಪಾವಳಿ ಹಾಗೂ ಚಿತ್ರಾವಳಿ ಎಂಬ ವಿನ್ಯಾಸಗಳು ಇದ್ದವು.ಕರ್ನಾಟಕದ ಮಹಿಳೆಯರು ಕಂಚುಕ ಎಂಬ ಕಿರಿದಾದ ಹಾಗೂ ಬಿಗಿಯಾದ ಕುಪ್ಪಸವನ್ನು ತೊಡುತ್ತಿದ್ದರು. ರಾಜರತ್ನಗಿರಿಯಲ್ಲಿ, ಕಲ್ಹಣನು ಹೇಳಿದ ಪ್ರಕಾರ, ಕಾಶ್ಮೀರದ ರಾಜನಾದ ಹರ್ಷನು ಕರ್ನಾಟಕದ ಮಹಿಳೆಯರು ಧರಿಸುತ್ತಿದ್ದ ಈ ವಿಶೇಷ ಕುಪ್ಪಸವನ್ನು ತನ್ನ ಸ್ವಂತ ದೇಶದಲ್ಲಿ ಪರಿಚಯಿಸಿದನು.ಪುರುಷ ಹಾಗೂ ಮಹಿಳೆಯರಿಬ್ಬರೂ, ಸುವಾಸಿತ ಹೂಗಳಿಂದ ಮಾಡಿದ ಹಾರಗಳನ್ನು ತಮ್ಮ ತಲೆ ಹಾಗೂ ಕತ್ತುಗಳಲ್ಲಿ ಧರಿಸಿ ಅಲಂಕರಿಸಿಕೊಳ್ಳುತ್ತಿದ್ದರು.ಮಹಿಳೆಯರಂತೆ, ಪುರುಷರೂ ಉದ್ದನೆಯ ಕೂದಲನ್ನು ಬೆಳೆಸಿಕೊಳ್ಳುತ್ತಿದ್ದರು.

## ಮದುವೆ

ಸಾಮಾನ್ಯವಾಗಿ, ಹಿಂದೂಗಳು ತಮ್ಮ ಮಗಳನ್ನು ಮದುಮಗನಿಗೆ ಕನ್ಯಾದಾನ ಮಾಡುತ್ತಿದ್ದರು.ಮದುವೆಯ ಸಮಾರಂಭವನ್ನು ಸಾಮಾನ್ಯವಾಗಿ ಮದುಮಗಳ ಮನೆಯಲ್ಲಿ ಅಥವಾ ಕೆಲವೊಮ್ಮೆ ದೇವಾಲಯ, ಮಠ ಅಥವಾ ಛತ್ರದಲ್ಲಿ ನೆರವೇರಿಸಲಾಗುತ್ತಿತ್ತು.ಮದುವೆಯ ಸಮಾರಂಭಗಳಲ್ಲಿ, ವೀಳ್ಯದ ಶಾಸ್ತ್ರ (ವೀಳ್ಯದೆಲೆಯ ಸಮಾರಂಭ), ಮದುವೆಯ ಪ್ರಸ್ತಾಪವನ್ನು ಇತ್ಯರ್ಥಗೊಳಿಸುವ ನಿಶ್ಚಿತಾರ್ಥ, ದೇವರ ಹಾಗೂ ಗಂಡು-ಹೆಣ್ಣಿನ ಪೂರ್ವಿಕರ ಆಶೀರ್ವಾದವನ್ನು ಯಾಚಿಸುವ ದೇವದೃತ, ಹಾಗೂ ಮದುವೆಯ ಚಪ್ಪರವನ್ನು ಕಟ್ಟುವ ಚಪ್ಪರ (ಅಥವಾ ಎಲೆವಾಸ) ಗಳನ್ನು ಒಳಗೊಂಡಿವೆ.ಬ್ರಾಹ್ಮಣರು ಹಾಗೂ ವೈಶ್ಯರಂತೆ ಅವರ ಆಚಾರಗಳನ್ನು ಅನುಸರಿಸುವವರಲ್ಲಿ, ವರಪೂಜೆ, ಅಂದರೆ, ವಧುವಿನ ತಂದೆ-ತಾಯಿಯು ವರನಿಗೆ ಗೌರವ ಸೂಚಿಸುವ ಸಮಾರಂಭವು, ಮದುವೆಯ ಸ್ಥಳಕ್ಕೆ ವರನು ಬಂದಾಗ ಮಾಡಲಾಗುತ್ತದೆ; ವಧೂ-ವರರ ಪೂರ್ವಿಕರನ್ನು ಆವಾಹನೆ ಮಾಡಿಕೊಳ್ಳುವ ನಾಂದಿ; ಮದುವೆಯ ಪರಿಸ್ಥಿತಿಗೆ ಜೋಡಿಯು ಪ್ರವೇಶಿಸುವ ಕುರುಹಾಗಿ ಕಂಕಣ-ಧಾರಣ (ಕೈಗೆ ಕಟ್ಟಿಕೊಳ್ಳುವ ಕೈಮಣಿ ಪಟ್ಟಿ); ಜೋಡಿಯು ಒಬ್ಬರ ತಲೆಯ ಮೇಲೊಬ್ಬರು ಎರಚಿಕೊಳ್ಳುವ, ಅರಿಶಿನದಲ್ಲಿ ಕಲಸಿದ ಅಕ್ಕಿಯ ಅಕ್ಷತೆ; ಅತ್ಯಂತ ಪ್ರಮುಖವಾದ ಧಾರ್ಮಿಕ ಸಂಸ್ಕಾರದ ಮಂಗಳಸೂತ್ರ (ಕರಿಮಣಿಯಿರುವ ಕಪ್ಪು ದಾರ), ಕೈಜೋಡಿಸಿದ ವಧೂ-ವರರ ಕೈಗಳ ಮೇಲೆ ಬಂಧು-ಬಳಗದವರು ಹಾಕುವ ಹಾಲಿನ ಧಾರೆ,ವಧೂ-ವರರ ಮೇಲೆ ಆಶೀರ್ವಾದವಾಗಿ ಹಾಕುವ ಅಕ್ಷತೆ ಕಾಳಿನ ಸೇಸೆ, ಲಾಜಾಹೋಮ (ಲಾಜಾ ಅಥವಾ ಒಣಗಿದ ಅಕ್ಕಿಯನ್ನು ಪವಿತ್ರ ಅಗ್ನಿಗೆ ಅರ್ಪಿಸುವ ಮೂಲಕ, ಅದರ ಆರಾಧನೆ) ಹಾಗೂ ಸಪ್ತಪದಿಗಳು (ಪವಿತ್ರ ಅಗ್ನಿಯ ಸುತ್ತ ನಡೆಯುವ ಏಳು ಹೆಜ್ಜೆಗಳು) ಮದುವೆಯ ಸಮಾರಂಭದ ಮುಖ್ಯ ಆಚರಣೆಗಳು. ಇದರ ನಂತರ ಬರುವ ಆಚರಣೆಯೆಂದರೆ ಭೂಮ - ಹೊಸದಾಗಿ ಮದುವೆಯಾದ ಜೋಡಿಯು



*ಖಾಜಿನ ಗೌಡ್ರ ವಾಡೆಯ ಭಿತ್ತಿಚಿತ್ರ*



ಆಕರ್ಷಕ ಚಿತ್ರ ದೃಶ್ಯಾ
ಜಗನ್ಮೋಹನ ಕಲಾ ಗ್ಯಾಲರಿ,
ಮೈಸೂರು

ಒಟ್ಟಿಗೆ ಕುಳಿತು ತಿನ್ನುವುದು, ನಾಗವಲ್ಲಿ – ಕೆಂಪು ಬಣ್ಣದ ನೀರನ್ನು ಹೊಂದಿದ ಪಾತ್ರೆಯಲ್ಲಿ ವಿಗ್ರಹವನ್ನು ಹುಡುಕುವುದು, ಕಂಕಣ ವಿಸರ್ಜನೆ -ಜೋಡಿಯ ಕೈಗಳಿಂದ ಕೈಕಟ್ಟಿನ ದಾರವನ್ನು ಬಿಚ್ಚುವುದು, ಹಾಗೂ ಕೊನೆಯದಾಗಿ ಗದ್ದಿಗೆ (ಅಥವಾ ಸಿಂಹಾಸನ) ಪೂಜೆಯು ನಡೆಯುತ್ತದೆ.

ಸಮಾಜದ ಮೇಲಿನ ವರ್ಗಗಳಲ್ಲಿ ಬಹುಪತ್ನಿತ್ವವು ಸಾಮಾನ್ಯವಾಗಿರಲಿಲ್ಲ. ವೈಯಕ್ತಿಕ ಆಯ್ಕೆಗಿಂತ, ಮದುವೆಯು ಧಾರ್ಮಿಕ ಅವಶ್ಯಕತೆ ಆಗಿತ್ತು. ಚಂದ್ರಲೇಖಳು ವಿಕ್ರಮಾದಿತ್ಯನನ್ನು ಆಯ್ಕೆ ಮಾಡಿಕೊಂಡಾಗ, ಅವನೀತನನ್ನು ಪುನ್ನಾಟದ ರಾಜಕುಮಾರಿಯು ಆರಿಸಿಕೊಂಡಂತೆ ಸ್ವಯಂವರ ಪದ್ಧತಿಯನ್ನು ಒಮ್ಮೊಮ್ಮೆ ರಾಜಕುಮಾರಿಯರು ಅನುಸರಿಸುತ್ತಿದ್ದರು.

ಹಲವಾರು ವಿದೇಶೀ ಹಾಗೂ ಆದಿವಾಸಿ ಜನಾಂಗಗಳು ಹಿಂದುತ್ವವನ್ನು ಒಪ್ಪಿಕೊಂಡಿದ್ದರು, ಉತ್ತರದಿಂದ ಬಂದ ಜನರು ದಕ್ಷಿಣದ ಜನರೊಂದಿಗೆ ಬೆರಕೆ ಬೆರೆತು ಹೋಗಿದ್ದು ಇದು ನೂತನ ಸಾಮಾಜಿಕ ಗುಂಪುಗಳನ್ನು ಸೃಷ್ಟಿಸಿ ವಿವಿಧ ಧರ್ಮಗಳ ನಡುವಣ ಅಂತರ–ವಿವಾಹಗಳ ಪ್ರಚಲಿತತೆಗೆ ವಿವರಣೆಯನ್ನು ನೀಡುತ್ತದೆ.


*Bridal finery*

## ಮನರಂಜನೆ

ರಾಜರು ಹಾಗೂ ಜನರಿಗೆ, ಬೇಟೆ ಆಡುವುದು, ಕುಸ್ತಿ ಹಾಗೂ ದೊಂಬರಾಟಗಳು ಸಮಯ ಕಳೆಯುವ ಮೆಚ್ಚಿನ ಮನರಂಜನೆಗಳಾಗಿದ್ದವೆಂದು ತೋರುತ್ತದೆ. ಕ್ರಿ.ಶ.೯೮೨ರ ಶಾಸನವೊಂದು, ಚೆಂಡಿನ ಆಟವೊಂದರಲ್ಲಿ, ಆಟದಲ್ಲಿ ಕುದುರೆಗಳ ಬಳಕೆಯನ್ನು ಸೂಚಿಸುವ ಚಂಡಿನ ಆಟ, ಅಂದರೆ ಬಹುಶಃ ಪೋಲೋದಲ್ಲಿ ರಾಷ್ಟ್ರಕೂಟ ಇಂದ್ರನು ಅಪ್ರತಿಮ ಕೌಶ್ಯಲ್ಯವನ್ನು ತೋರಿದನೆಂದು ವಿವರಿಸುತ್ತದೆ. ಒಂದು ವೃತ್ತಾಂತದ ಪ್ರಕಾರ, "ಭೂಮಿಯಲ್ಲಿ ಕೇವಲ ಇಂದ್ರನು ಮಾತ್ರ ಸುಖರ, ದುಷ್ಕರ, ವಿಷಮ ಹಾಗೂ ವಿಷಮ ದುಷ್ಕರಗಳೆಂಬ ವಿವಿಧ ಚಲನೆಗಳನ್ನು ಮಾಡಲು ಸಮರ್ಥನಾದವನು; ರಟ್ಟಿ ಕಂದರ್ಪನಂತೆ, ಒಳಗೆ, ಹೊರಗೆ, ಬಲಕ್ಕೆ ಹಾಗೂ ಎಡಕ್ಕೆ ಒಂದು ಹೊಡೆತವನ್ನೂ ತಪ್ಪಿಸದೆ ಅತ್ಯಂತ ವೇಗದ ಚಲನೆಗಳನ್ನು ಮಾಡುವ ಸೊಗಸು, ಹಾಗೂ ವೃತ್ತಾಕಾರವಾಗಿ, ಮೇಲಕ್ಕೆ, ಹಿಂದಕ್ಕೆ ತಿರುಗಿ ಹಾಗೂ ಹಿನ್ನಡೆಯುವಂತಹ ದೋಷಗಳನ್ನು ತಪ್ಪಿಸಿ, ಚೆಂಡನ್ನು (ಗಿರಿಗೆ) ಆಚೆಯೂ ಹೋಗದೆ ಅಥವಾ ಅದು ಬರುವ ಮುನ್ನವೇ ಬಡಿಯದೆ, ಅದನ್ನು ಕೋಲಿನಿಂದ ಸರಿಯಾಗಿ ಗುರಿಯಿಟ್ಟು ಹೊಡೆಯುತ್ತಾನೆ."

ಸಿರಿವಂತರು ತಮ್ಮ ಸುಂದರವಾದ ವನ ಹಾಗೂ ತೋಪುಗಳಲ್ಲಿ ವಿನೋದವನ್ನು ಕಂಡರು.ಸುಗಂಧಭರಿತ ಹೂ ಹಾಗೂ ಎಳೆ ಬಳ್ಳಿಗಳಿಂದ ಆವೃತವಾದ ಜಾಲರಿ ಚೌಕಟ್ಟಿನಡಿಗೆ, ಅಡಿಕೆ ಹಾಗೂ ಸಂಪಿಗೆ ಮರಗಳ ಅಭೇದ್ಯ ನೆರಳು ಹಾಗೂ ಹರಿಯುತ್ತಿರುವ ಸಣ್ಣ ತೊರೆಗಳು ಸುಡು ಬಿಸಿಲಿನ ನಡುವೆ ತಣ್ಣನೆಯ ಆಶ್ರಯ ನೀಡುತ್ತಿದ್ದವು. ಬೇಸಿಗೆಯಲ್ಲಿ ಅನೇಕ ಬಾರಿ, ಕಪ್ಪು ಅಮೃತಶಿಲೆ ಅಥವಾ ಸ್ಫಟಿಕ ಗಳಿಂದ ನಿರ್ಮಿಸಲಾದ ಸ್ನಾನ–ಗೃಹಗಳಲ್ಲಿ ರಾಜ ಹಾಗೂ ರಾಜಕುಮಾರರು ಸುದೀರ್ಘ ಸ್ನಾನವನ್ನು ಮಾಡಿದರು. ಅಂಕಕಾರರು ಅವರ ಅಂಗಮರ್ದನ ಮಾಡುತ್ತಿದ್ದರು, ಬೆಳ್ಳನೆಯ ಬಾಲೆಯರು, ವಿವಿಧ ಗಿಡಮೂಲಿಕೆಗಳೊಂದಿಗೆ ಬೆರೆತ ಸುಗಂಧಭರಿತ ಎಣ್ಣೆಗಳ ಲೇಪನವನ್ನು ಮಾಡುತ್ತಿದ್ದರು.

ಪಟ್ಟಣಗಳಲ್ಲಿನ ಜನರ ಹೊರಾಂಗಣ ಮನರಂಜನೆಯು ವಾರದ ಸಂತೆ ಹಾಗೂ ಉತ್ಸವಗಳಿಗೆ ಸೀಮಿತವಾಗಿತ್ತು; ಅಲ್ಲಿ ಜನರು ಬೃಹತ್ ಸಂಖ್ಯೆಯಲ್ಲಿ ನೆರೆಯುತ್ತಿದ್ದು, ವಿವಿಧ ಆಟ ಹಾಗೂ ಸಂಭ್ರಮಾಚರಣೆಗಳಲ್ಲಿ ಪಾಲ್ಗೊಂಡು ಆನಂದಿಸುತ್ತಿದ್ದರು. ಜನರು ತೀರ್ಥಯಾತ್ರೆ ಕೈಗೊಂಡು, ದೇವಾಲಯಗಳಿಗೆ ಭೇಟಿ ನೀಡುವುದು ವಾಡಿಕೆಯಾಗಿತ್ತು. ದೇವಾಲಯಗಳಿಗೆ ರಾಜ್ಯದ ನೆರವು, ಧಾರಾಳ ಮನಸ್ಸಿನ ನಾಗರಿಕರಿಂದ ದತ್ತಿಗಳು ಹಾಗೂ ವಿವಿಧ ಔದ್ಯಮಿಕ ಹಾಗೂ ವಾಣಿಜ್ಯ ವರ್ಗಗಳಿಂದ ದೊರೆತ ಕೊಡುಗೆಗಳಿಂದಾಗಿ ದೇವಾಲಯಗಳ ನಿರ್ವಹಣೆ ನಡೆಯುತ್ತಿತ್ತು. ಅಂಗರಕ್ಷಕರು, ನೃತ್ಯಗಾರರು, ಅಡುಗೆ ಭಟ್ಟರು, ಡೋಲು ಬಡಿಯುವವರು, ಅಕ್ಕಸಾಲಿಗರು, ಅಲಂಕಾರ ಮಾಡುವವರು, ಪೆರ್ಗಾಡೆ, ಪುರಾಣಿಕರು ಹಾಗೂ ಆಚಾರ್ಯರನ್ನು ಒಳಗೊಂಡ ಈ ಬೃಹತ್ ಸಂಸ್ಥೆಯ ನಿರ್ವಹಣೆಗಾಗಿ ದೊಡ್ಡ ಮೊತ್ತವೇ ಬೇಕಾಗುತ್ತಿತ್ತು. ಭೇಟಿ ಮಾಡುವ ಶುಲ್ಕ, ವ್ಯಾಪಾರಿ ಹಾಗೂ ರೈತರ ಮೇಲೆ ವಿಧಿಸಲಾದ ಸುಂಕ, ದತ್ತಿಗಳ ಮೇಲಿನ ಬಡ್ಡಿ, ವಸ್ತುಗಳ ಮೇಲಿನ ತೆರಿಗೆ; ಎಣ್ಣೆ, ಅಕ್ಕಿ ಹಾಗೂ ಇತರ ಅಗತ್ಯಗಳನ್ನು ದೇವಾಲಯಕ್ಕೆ ನಿಯಮಿತವಾಗಿ ಸರಬರಾಜು ಮಾಡುವ ಎಣ್ಣೆ ತಯಾರಕರು, ಅಕ್ಕಿ ವ್ಯಾಪಾರಿಗಳು ಹಾಗೂ ಇತರ ವ್ಯಾಪಾರಿಗಳ ವೃತ್ತಿ ಸಂಘಗಳಿಂದ ಇದನ್ನು ಭಾಗಶಃ ಪೂರೈಸಲಾಗುತ್ತಿತ್ತು. ಶಾಶ್ವತ ಅಧೋಗತಿಗೆ ಬೀಳುವ ಭೀತಿ ಹಾಗೂ ಅವರ ಕುಲವು ನಿರ್ನಾಮವಾಗುವ ಆತಂಕಗಳು ವ್ಯಾಪಾರಿಗಳು ನಿಯಮಿತ ದತ್ತಿಗಳನ್ನು ದೇವಾಲಯಕ್ಕೆ ನೀಡಲು ಪ್ರೇರೇಪಿಸುತ್ತಿತ್ತು.

ದೈನಂದಿನ ಜೀವನದ ನೀರಸ ಏಕತಾನತೆ ಯಿಂದ ಉಪಶಮನ ಪಡೆಯಲು, ಹಬ್ಬದ ಸಂದರ್ಭಗಳಲ್ಲಿ ದೇವಾಲಯಗಳಲ್ಲಿ ನಡೆಯುತ್ತಿದ್ದ ಸಂಗೀತ, ನೃತ್ಯ, ಮೂಕಾಭಿನಯ, ಪ್ರವಚನ, ಪ್ರದರ್ಶನಗಳು ಹಾಗೂ ದೊಂಬರಾಟಗಳನ್ನು ನೋಡಲು, ಜನರು ಅಲ್ಲಿ ಸದಾ ಸೇರುತ್ತಿದ್ದರು.ದೊಡ್ಡ ಹಬ್ಬಗಳೆಂದರೆ ಉತ್ತರಾಯಣ, ದಕ್ಷಿಣಾಯನ, ಚೈತ್ರ, ತುಲಾಪುರುಷ, ಸುಗ್ಗಿ ಹಾಗೂ ದೀಪಾವಳಿಗಳಾಗಿದ್ದು ನೇಯ್ಗೆಯವರಲ್ಲಿ ನೂಲಿನ ಹಬ್ಬದ ಆಚರಣೆ ಆಗುತ್ತಿತ್ತು. ದೇವರಿಗೆ ಸುಗ್ಗಿ ಹಾಗೂ ವೀಳ್ಯಗಳನ್ನು ಅರ್ಪಣೆ ಮಾಡಲಾಗುತ್ತಿದ್ದು ದೇವಾಲಯಗಳನ್ನು ಅಲಂಕರಿಸಿ, ದೀಪ ಬೆಳಗಿಸುತ್ತಿದ್ದರು. ಸಮಯವನ್ನು ತಿಳಿಯಲು, ದೇವಾಲಯಗಳಲ್ಲಿ ಘಟಿಕಾ


ಸತಿ ಸ್ಮಾರಕ, ಹಿರೇಕೆರೂರು

ವ್ಯವಸ್ಥೆಯನ್ನು ಮಾಡಲಾಗಿರುತ್ತಿತ್ತು – ಇದರ ಮೂಲಕ, ಅಲ್ಲಿನ ಅಧಿಕಾರಿಗಳು ತಮ್ಮ ಬೆಳಗಿನ ಹಾಗೂ ಸಂಜೆಯ ಪ್ರಾರ್ಥನೆಯನ್ನು ನಿಯಮಿತವಾಗಿ ನೆರವೇರಿಸುತ್ತಿದ್ದರು.

## ಇಂದ್ರಜಾಲ ಹಾಗೂ ಶಕುನಗಳು

ಇಂದ್ರಜಾಲ ಹಾಗೂ ಅತೀಂದ್ರಿಯದ ಬಗೆಗಿನ ಒಲವು ಹಾಗೂ ಮಂತ್ರ–ತಂತ್ರಗಳ ಸಾಮರ್ಥ್ಯವನ್ನು ಕುರಿತಾಗಿ ಜನರ ಮನಸ್ಸಿನಲ್ಲಿ ಬಲವಾದ ನಂಬಿಕೆಗಳು ಇದ್ದವು. ಬರ ಹಾಗೂ ಸೋಂಕು ರೋಗಗಳಿಂದ ದನಗಳನ್ನು ರಕ್ಷಿಸಲು, ದೇಶದೆಲ್ಲೆಡೆಯಲ್ಲೂ ರಾಜರು ಯಂತ್ರದ ಕಲ್ಲುಗಳನ್ನು ಸ್ಥಾಪಿಸಿದ್ದರು. ಸರ್ವತೋಭದ್ರದ ೩೨ ಅಕ್ಷರಗಳು ಹಾಗೂ ೧೨ ಬಾರಿ ಪುನರಾವರ್ತಿತವಾದ ಹ್ರೀಂ ಎಂಬ ಶಬ್ದವನ್ನು ಹೊಂದಿದ ೩೨ ಸಣ್ಣ ಚೌಕಗಳನ್ನು ಹೊಂದಿದ ಆಧ್ಯಾತ್ಮಕ್ಕೆ ಸಂಬಂಧಿಸಿದ ಚಿತ್ರಗಳನ್ನು ಇವುಗಳ ಮೇಲೆ ಕೆತ್ತಲಾಗುತ್ತಿತ್ತು. ಭೂತ–ಪ್ರೇತಗಳನ್ನು ಓಡಿಸಲು, ಮಂತ್ರವಾದಿಗಳನ್ನು ನೇಮಕ ಮಾಡಿಕೊಳ್ಳಲಾಗುತ್ತಿತ್ತು. ದೇಹ ಹಾಗೂ ಮನಸ್ಸಿನ ಖಾಯಿಲೆಗಳನ್ನು ಗುಣಪಡಿಸಲು, ವಿವಿಧ ರೀತಿಯ ಔಷಧಗಳನ್ನು ತಯಾರಿಸಲಾಗುತ್ತಿತ್ತು. ಕಣ್ಣುಗಳಿಗೆ ಲೇಪಿಸುವ ಅಂಜನವು ಹುದುಗಿದ ನಿಧಿಯನ್ನು ಕಂಡುಹಿಡಿಯುವ ಸಾಮರ್ಥ್ಯವನ್ನು ಸೃಷ್ಟಿಸುವುದೆಂದು ನಂಬಲಾಗಿತ್ತು.

ದಳ್ಳೂರಿ ಅಥವಾ ಮಾರಿ ಬೆಂಕಿ , ಕಪ್ಪು ಬಟ್ಟೆ, ಎಣ್ಣೆ, ಬೆತ್ತಲೆ ಭಿಕ್ಷುಗಳು, ಕೆದರಿದ ತಲೆಯ ಮಹಿಳೆಯರು, ಕುರುಡರು, ನಾಗರಹಾವು ಹಾಗೂ ಮೊಲಗಳ ದರ್ಶನ, ಅದರಲ್ಲೂ ಪ್ರಯಾಣಕ್ಕೆ ಮುನ್ನ ನೋಡುವುದು ಅಶುಭವೆಂದು ಪರಿಗಣಿಸಲಾಗುತ್ತಿತ್ತು. ಶೂದ್ರ ಬೈರಾಗಿಗಳು ಮುಂಜಾನೆಯೇ ಮನೆಗಳ ಮುಂದೆ ಬಂದು, ತಮ್ಮ ಕೈಗಳಲ್ಲಿ ಸಣ್ಣ ಡಮರುಗವನ್ನು ಹಿಡಿದು, ಭವಿಷ್ಯವನ್ನು ನುಡಿದು, ಅದು ಪಿಂಗಳ ಪಕ್ಷಿಗಳು ಹೇಳಿದುದಾಗಿ ಘೋಷಿಸುತ್ತಿದ್ದರು.

## ಆತ್ಮಾರ್ಪಣೆ

ಸಲ್ಲೇಖನ ವಿಧಿ–ವಿಧಾನಗಳ ಮೂಲಕ, ವಿರಕ್ತ ಗುಣಗಳುಳ್ಳ ಜೈನ ಶ್ರಾವಕರು ಹಾಗೂ ಶ್ರಾವಕಿಯರು ಆಮರಣಾಂತ ಉಪವಾಸ ವ್ರತ ಕೈಗೊಂಡು ತಮ್ಮ ಜೀವನವನ್ನು ಇಚ್ಛಾಮರಣದ ಮೂಲಕ ಅಂತ್ಯಗೊಳಿಸುತ್ತಿದ್ದರು. ಚಿತೆಗೆ ಧುಮುಕಿ ಅಥವಾ ನದಿಯೊಳಗೆ ಹಾರುವ ಮೂಲಕ, ಶಪಥವನ್ನು ತೆಗೆದುಕೊಂಡ ಜನರು ಅಥವಾ ವಾಸಿಯಾಗದ ಖಾಯಿಲೆಯಿಂದ ನರಳುತ್ತಿರುವವರು ತಮ್ಮ ಪ್ರಾಣವನ್ನು ಕಳೆದುಕೊಳ್ಳುತ್ತಿದ್ದರು.

ತಮ್ಮ ಒಡೆಯರಿಗೆ ಚಿರಂತನ ಅನುರಾಗ ಹಾಗೂ ನಿಷ್ಠೆಯನ್ನು ತೋರಿಸುವ ಉದ್ದೇಶದೊಂದಿಗೆ, ಆತ್ಮಾರ್ಪಣೆಯ ಶಪಥಗಳನ್ನು ರಾಜಮನೆತನದ ಸೇವಕರು ಹಾಗೂ ಮುಖ್ಯಸ್ಥರು ಕೈಗೊಳ್ಳುತ್ತಿದ್ದರು. ಜೀವಂತವಾಗಿ ಬೆಂಕಿಗೆ ಹಾರುವ ಮೂಲಕ ಅಥವಾ ತಮ್ಮ ಒಡೆಯನ ಮೃತ ದೇಹದ ಕೆಳಗೆ ಜೀವಂತವಾಗಿ ಹೂಳಿಸಿಕೊಳ್ಳುವ ಮೂಲಕ, ಅವರ ಕೀಳ್ಗುಂಟೆಯಾಗಿ ಇದನ್ನು ಸಾಧಿಸುತ್ತಿದ್ದರು. ಇತರರಿಗೆ ಪ್ರೇಮ ಹಾಗೂ ನಿಷ್ಠೆಯನ್ನು ತೋರಲು ಮಾತ್ರವೇ ಆತ್ಮಾರ್ಪಣೆ ಶಪಥಗಳನ್ನು ಕೈಗೊಳ್ಳಲಾಗುತ್ತಿರಲಿಲ್ಲ, ಆದರೆ ಮಹದಾಸೆಯೊಂದು ಪೂರೈಸಿದಾಗಲೂ ಕೆಲವೊಮ್ಮೆ ಹೀಗೆ ಮಾಡುತ್ತಿದ್ದರು.ತಮ್ಮ ಸ್ವಾಮಿ ಕಾಲವಾದ ನಂತರ ಬದುಕಿರಬಾರದೆಂದು ಶಪಥವನ್ನು ತೆಗೆದುಕೊಂಡ ನಿಷ್ಠಾವಂತ ಲೆಂಕ, ಗರುಡ, ಸೇವಕರು, ಒಡೆಯ ಮಡಿದಾಗ ತಮ್ಮ ತಲೆಗಳನ್ನೇ ಅರ್ಪಿಸುವ ಮೂಲಕ ಅದನ್ನು ತೀರಿಸುತ್ತಿದ್ದರು.

## ಸಾವಿನ ಪರಿಗಣನೆ

ಸ್ಥಳೀಯ ಮಂದಿರಗಳು ತುಂಬಿದ ಹರಕೆಯ ಸಲ್ಲಿಕೆಗಳ ಮಹಾಪೂರದಲ್ಲಿ, ಮಾನವೀಯತೆಯು ಹಿಂದೂ ಪ್ರವೃತ್ತಿಯ ವಿಶೇಷ ಲಕ್ಷಣ ಸಾಮಾನ್ಯವಾಗಿತ್ತು. ಅದೇ ರೀತಿಯಲ್ಲಿ, ಮೃತ ವೀರರು ಹಾಗೂ ಮಹಾಸತಿಯರ ಸ್ಮರಣಾರ್ಥವಾಗಿ ದಾರಿಗಳ ಪಕ್ಕದಲ್ಲಿ ಸ್ವರ್ಗಾರೋಹಣ ಮಾಡುತ್ತಿರುವ ವೀರನ ದೃಶ್ಯಗಳನ್ನು ಹೊಂದಿದ ಸ್ಮಾರಕ ಕಲ್ಲುಗಳನ್ನು ನೆಡುವ ವಾಡಿಕೆಯಿಂದ, ಅದು ಶಿಲ್ಪಗಳ ರಾಷ್ಟ್ರೀಯ ವೀಕ್ಷಣಾಲಯದಂತಾಗಿ, ಜನಮಾನಸದಲ್ಲಿ ಹಾಸುಹೊಕ್ಕಾದ ಕಲೆಯನ್ನು ನಿರೂಪಿಸಿತು. ಮರಣದಿಂದ ಇತರರಲ್ಲಿ ಎಚ್ಚೆತ್ತುಕೊಳ್ಳುವ ಅಗಲಿಕೆ, ಏಕಾಂಗಿತನ, ದುಃಖ, ವೈರಾಗ್ಯಭಾವ, ಸಹಿಷ್ಣುತೆಗಳಂತಹ ಎಲ್ಲ ಸೂಚನೆಗಳು, ಹಾಗೂ ಆಧ್ಯಾತ್ಮಿಕ ಆಶಯದ ಅಮರ ಸೂಚನೆಗಳು ಹಾಗೂ ಮರಣಾಧೀನತೆಯ ನಂತರದ ಜೀವನವನ್ನು ಈ ಶಿಲ್ಪಗಳಲ್ಲಿ ಪ್ರತಿಬಿಂಬಿಸಲಾಗಿದೆ.

ಅವಿಚ್ಛಿನ್ನವಾದ ತಲೆಮಾರುಗಳ ನಂತರವೂ, ಕರ್ನಾಟಕದ ಸಂಸ್ಕೃತಿಯು ಅಷ್ಟಾಗಿ ಬದಲಾವಣೆಯಾಗಿಲ್ಲ. ನಿಧಾನವಾಗಿ, ಕೇವಲ ಕೆಲವೇ ತಿದ್ದುಪಡಿ ಹಾಗೂ ಪರಿವರ್ತನೆಗಳು ನುಸುಳಿದ್ದು ಈ ಬದಲಾವಣೆಗಳನ್ನು ಜನರು ಸಹಿಷ್ಣತೆ ಹಾಗೂ ಸ್ವೀಕೃತ ಭಾವದಿಂದ ಅಂಗೀಕರಿಸಿದ್ದಾರೆ.


ಆತ್ಮಬಲಿದಾನ ಶಿಲ್ಪ, ಕೌಜಲಗೇರಿ, ಗದಗ ಜಿಲ್ಲೆ,